| ಸಂಪಾದಕ ಸಮಿತಿ | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಸದಸ್ಯರು |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಪಿ. ನಟರಾಜನ್ | ಸಂಪಾದಕ |



# ಬೃಹಚ್ಚರಣ


| ಸಂಘದ ಸದಸ್ಯರಾಗಿ | | |
|---|---|---|
| ಮಹಾ ಪೋಷಕರು | – | 25,000/- |
| ಪೋಷಕರು | – | 5,000/- |
| ಸದಸ್ಯತ್ವ | – | 1,000/- |
| ವಾರ್ಷಿಕ ನಿರ್ವಹಣೆ | – | 500/- |

ಸಂಪುಟ : 6 ಸಂಚಿಕೆ : 4 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2016


## ನೂತನ ವರ್ಷ 2017 ಹಾಗೂ ಸಂಕ್ರಾಂತಿಯ ಶುಭಾಶಯಗಳು

## ಅಧ್ಯಕ್ಷರ ನುಡಿ



ಸಂಘದ ಅಧ್ಯಕ್ಷರಿಂದ 2017ನೇ ದಿನಚರಿ ಬಿಡುಗಡೆ

ಆತ್ಮೀಯ ಬಂಧುಗಳೇ ನಮಸ್ಕಾರ.

ಹೊಸ ವರ್ಷ 2017ನೇ ಇಸವಿಯು ತಮ್ಮೆಲ್ಲರಿಗೂ ಶುಭ ತರಲಿ ಅಂತೆಯೇ ಸಂಕ್ರಾಂತಿ ಹಬ್ಬವು ಸುಖ, ಸಂತೋಷ, ನೆಮ್ಮದಿ, ಆರೋಗ್ಯ ತರಲಿ ಎಂದು ಸಂಘದ ಕಾರ್ಯಕಾರಿ ಸಮಿತಿಯ ಹಾರೈಸುತ್ತದೆ.

ಭಾನುವಾರ 27–11–2016ರ ಒಂದು ದಿನದ ಮೇಲುಕೋಟೆ ಪ್ರವಾಸವು ಸ್ಮರಣೀಯವಾಗಿತ್ತು. ಸುಸಜ್ಜಿತ 3 ಬಸ್ಸುಗಳಲ್ಲಿ 134 ಬಂಧುಗಳೊಂದಿಗೆ ಭಾಗವಹಿಸಿದವರೆಲ್ಲಾ ಸಂತೋಷ ವ್ಯಕ್ತ ಪಡಿಸಿರುವುದು ಸಂಘ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಉತ್ಸಾಹದ ಇಂಬು ಕೊಟ್ಟಂತಿದೆ. ಇದರ ಬಗ್ಗೆ ಪತ್ರ, ಸಂದೇಶಗಳನ್ನು ಕಳುಹಿಸಿದ ಪ್ರತಿಯೊಬ್ಬರಿಗೂ ಧನ್ಯವಾದ. ತಮ್ಮ ಸಹಕಾರ ಹೀಗೇ ಮುಂದುವರೆಯಲೆಂದು ಆಶಿಸುತ್ತೇನೆ. ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರಿಗೂ ತುಂಬು ಸಹಕಾರ ನೀಡಿರುವುದಕ್ಕೆ ಕೃತಜ್ಞತೆ. ಅಂತೆಯೇ ಭೇಟಿ ನೀಡಿದ ಸ್ಥಳಗಳಲ್ಲೆಲ್ಲಾ ಊಟ ಉಪಚಾರಗಳನ್ನು ನಿಗದಿತ ಸಮಯಕ್ಕೆ ಅಚ್ಚುಕಟ್ಟಾಗಿ ನೀಡಿದವರಿಗೆಲ್ಲಾ ಸಂಘ ಆಭಾರಿ.

ಸದಸ್ಯರ ಕೋರಿಕೆಯಂತೆ 2017ರ ದಿನಚರಿ ಕ್ಯಾಲೆಂಡರನ್ನು ಪ್ರಾಯೋಜಕರ ನೆರವಿನಿಂದ ಬಿಡುಗಡೆ ಮಾಡಿ ಹಂಚಲಾಗುತ್ತಿದೆ. ಪ್ರಾಯೋಜಕರಿಗೆ ಧನ್ಯವಾದಗಳು. ಈ ವರ್ಷ ಮಾರ್ಚ್, 2, 2017, ಗುರುವಾರ ನಡೆಯುವ ನಾಗಾರಾಧನೆಗೆ ತಮ್ಮ ಸಹಕಾರ ಕೋರುತ್ತೇನೆ. ಸಂಘಕ್ಕೆ ಉದಾರ ದೇಣಿಗೆ ನೀಡುತ್ತಿರುವವರಿಗೆಲ್ಲಾ ಕೃತಜ್ಞತೆಗಳು. ವಾರ್ಷಿಕ ಚಂದ ನೀಡಬೇಕಿರುವ ಸದಸ್ಯರು ಕೂಡಲೇ ನೀಡುತ್ತೀರೆಂಬ ನಂಬಿಕೆ.





ತಮ್ಮವ,

■ ಎಸ್. ಸೋಮಸುಂದರ

## ಪ್ರವಾಸ ವಿಶೇಷಾಂಕ




ಬೃಹಚ್ಚರಣ ಬಂಧುಗಳೆ..........

### ನಾಗಾರಾಧನೆ

ಪ್ರತಿವರ್ಷ ಫಾಲ್ಗುಣ ಶುದ್ಧ ಪಂಚಮಿಯಂದು ಭಕ್ತಿಯಿಂದ ಆಚರಿಸುವ 'ನಾಗಾರಾಧನೆ' ಹಾಗೂ ಷಷ್ಠಿಯಂದು ನಡೆಯುವ 'ಶ್ರೀಶ್ರೀನಿವಾಸ ದೇವರ ಬ್ರಹ್ಮರಥೋತ್ಸವ' ಕಾರ್ಯಕ್ರಮಗಳು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ಭಗವಂತನ ಪ್ರೇರಣೆಯಂತೆ ನಡೆಯಲಿದೆ.

02.03.2017, ಗುರುವಾರ–ನಾಗಾರಾಧನೆ.

03.03.2017, ಶುಕ್ರವಾರ–ಶ್ರೀ ಶ್ರೀನಿವಾಸ ದೇವರ ರಥೋತ್ಸವ. ಈ ದೇವತಾ ಕಾರ್ಯಗಳಲ್ಲಿ ಪಾಲ್ಗೊಳ್ಳಲು ವಿನಂತಿ.

* * *

ತಾ. 27.11.2016ನೇ ಭಾನುವಾರದಂದು ಸಂಘದ ವತಿಯಿಂದ ಆಯೋಜಿಸಲಾಗಿದ್ದ ಮೇಲುಕೋಟೆ ಹಾಗು ಕೆರೆ ತೊಂಡೂರು ಪ್ರವಾಸದಲ್ಲಿ ಭಾಗವಹಿಸಿದ ಎಲ್ಲ ಬೃಹಚ್ಚರಣ ಬಂಧುಗಳಿಗೆ, ಸ್ನೇಹಿತರಿಗೆ ಸಂಘದ ವತಿಯಿಂದ ಧನ್ಯವಾದಗಳು. ಪ್ರವಾಸದ ಬಗ್ಗೆ ಸಂಘಕ್ಕೆ ಅಭಿನಂದಿಸಿದವರಿಗೆಲ್ಲ ಕೃತಜ್ಞತೆಗಳು.



ವಿ.ಎಸ್. ಮಣಿ
ಕಾರ್ಯದರ್ಶಿ, ಎಂ.ಎಂ.ಡಿ.ಬಿ.ಎಸ್.

### ಅಭಿನಂದನೆ

ಶ್ರೀ ಶ್ರೀಹರಿ ಉಡುಪ 25,000/– ಹಾಗೂ ಶ್ರೀಮತಿ ವೈಜಯಂತಿ 21,000/– ರೂಪಾಯಿಗಳನ್ನು ಸಂಘಕ್ಕೆ ದೇಣಿಗೆಯಾಗಿ ನೀಡಿರುತ್ತಾರೆ. ಇವರ ಕುಟುಂಬಕ್ಕೆ ಸಂಘವು ಶುಭ ಹಾರೈಸುತ್ತದೆ

### ನಿವೇದನೆ

ಹೊಸ ವರ್ಷ 2017ನೇ ಇಸವಿಯ ನಮ್ಮ ಸಂಘದ ಕ್ಯಾಲೆಂಡರ್‌ನಲ್ಲಿ ನಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಬಿ.ಎಸ್. ಶರ್ಮ ಹಾಗೂ ಶ್ರೀ ಕೆ.ಎಸ್. ಅನಂತರವರ ಹೆಸರುಗಳು ಪ್ರಮಾದವಶಾತ್ ಬಿಟ್ಟು ಹೋಗಿರುತ್ತದೆ. ಇದಕ್ಕಾಗಿ ವಿಷಾದಿಸುತ್ತೇವೆ.

– ಅಧ್ಯಕ್ಷರು

## ಮೈ.ಮಂ.ದ್ರಾ.ಬ್ರ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

### ಕಾರ್ಯಕಾರಿ ಸಮಿತಿ : 2015–2018

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 98453 76949** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶನ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ್ ಶ್ರೀಧರ್, 9880187686** |
| | | **ಟಿ. ನಾಗೇಶ್, 99806 62118** |
| | | **ಬಿ.ಎನ್.ಜಿ. ಪ್ರಸಾದ್, 9845128229** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |

## ನಿಮ್ಮೊಡನೆ....

'ಬೃಹಚ್ಚರಣ' ಸಂಚಿಕೆಗೆ ಲೇಖನ ಕಳುಹಿಸುವವರು. ಪುಟದ ಒಂದು ಪಕ್ಕದಲ್ಲಿ ಮಾತ್ರ ಸ್ಫುಟವಾಗಿ ಲೇಖನ ಬರೆದು ಕಳುಹಿಸಿ. ಆದಷ್ಟೇ ಮೂಲ ಚಿತ್ರಗಳನ್ನು ಕಳುಹಿಸಿದರೆ ಒಳ್ಳೆಯದು. ವಾರ್ತಾ ಚಿತ್ರಗಳನ್ನು ಕಳುಹಿಸುವಾಗ ಅದರ ವಿವರವಿರಲಿ. ಯಾವುದೇ ಸಂತೋಷದ ಕಾರ್ಯಕ್ರಮ ತಮ್ಮ ಕುಟುಂಬದಲ್ಲಿ ನಡೆದಾಗ ಸಂಘದ ಯಾವುದೇ ಕಾರ್ಯಕಾರಿ ಸಮಿತಿ ಸದಸ್ಯರಿಗೆ ವಿವರವಾಗಿ ತಿಳಿಸಿ. **ಸಂ.**

## ಗಣ್ಯರೊಂದಿಗೆ



**ಬೃಹಚ್ಚರಣ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಶ್ರೀಕಂಠೇಶ್ವರ ಅಯ್ಯರ್ ಅಂದಿನ ಕರ್ನಾಟಕ ರಾಜಪ್ರಮುಖ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಹಾಗೂ ವಿದ್ಯಾಮಂತ್ರಿ ಶ್ರೀ ಎಸ್.ಆರ್. ಕಂಠಿ ಅವರೊಂದಿಗೆ ಬೆಂಗಳೂರಿನ ವಾಣಿ ಇನ್‌ಸ್ಟಿಟ್ಯೂಟ್‌ನಲ್ಲಿ (14.12.1961)**

## ಮನದ ಮಾತು...

'ಬೃಹಚ್ಚರಣ' ನಮ್ಮೆಲ್ಲರ ಪತ್ರಿಕೆಗೆ 5 ವರ್ಷ ತುಂಬಿರುವ ಸಮಯದಲ್ಲಿ ನೀವು ನೀಡಿರುವ ಸಲಹೆ, ಸಹಕಾರ, ಮೆಚ್ಚುಗೆಗೆ ಸಂಪಾದಕ ಮಂಡಳಿಯು ಚಿರಋಣಿ. ಅಂತೆಯೇ ಸಂಘದ ಆಡಳಿತ ಸಮಿತಿಯು ನಮಗೆ ನೀಡಿರುವ ಪ್ರೋತ್ಸಾಹ, ಸಹಕಾರಕ್ಕೆ ವಂದನೆಗಳು.

ಪ್ರತಿ ತ್ರೈಮಾಸಿಕ ಯಾವುದಾದರೂ ಒಂದು ವಿಶೇಷಾಂಕ ದೊಂದಿಗೆ ಪ್ರಕಟವಾಗಬೇಕೆಂಬುದು ನಮ್ಮ ಸಂಕಲ್ಪವಾಗಿದೆ. ನಿಮ್ಮಿಂದ ಹೆಚ್ಚಿನ ಸಹಕಾರ ಲೇಖನಗಳೊಂದಿಗೆ, ಛಾಯಾಚಿತ್ರಗಳು ನಮಗೆ ತಲುಪುತ್ತವೆಂದು ನಂಬಿಕೆ.

ನಾಗೇಶ್ವರ ಕ್ಷೇತ್ರ ಕಿತ್ತಿಗಾನಹಳ್ಳಿಯಲ್ಲಿ ನಡೆಯಲಿರುವ ನಾಗಾರಾಧನೆಯ ವಿಶೇಷಾಂಕ ಮುಂದಿನ ಸಂಚಿಕೆಯಾಗಲಿದ್ದು, ತತ್ಸಂಬಂಧ ಲೇಖನಗಳನ್ನು ನಿಮ್ಮಿಂದ ನಿರೀಕ್ಷಿಸುತ್ತೇವೆ. ಲೇಖನಗಳನ್ನು ಕಳುಹಿಸಲು ಕೊನೆಯ ದಿನಾಂಕ ಮಾರ್ಚ್ 20. ಲೇಖನಗಳ ಸಂಗ್ರಹದಿಂದ, ತಮ್ಮ ಕೈಸೇರುವವರೆಗೆ ಸಂಪಾದಕ ಮಂಡಳಿಯೊಂದಿಗೆ ಸ್ವಯಂಪ್ರೇರಿತರಾಗಿ ನಿಸ್ವಾರ್ಥ ಸೇವಾ ಮನೋಭಾವದ ಶ್ರೀ ಟಿ.ಎಸ್. ನಾಗೇಶ್ ಹಾಗೂ ಆರ್. ರಮೇಶ್ ಅವರಿಗೆ ಆಭಾರಿ.

ಶುಭವಾಗಲಿ,

ತಮ್ಮವ

■ **ಕೆ.ಸಿ.ನಟರಾಜನ್**

ಸಂಪಾದಕ, 9845113475



## 2017 ಕ್ಯಾಲೆಂಡರ್ ಪ್ರಾಯೋಜಕರು

*ಶ್ರೀಯುತರಾದ*

| | |
|---|---|
| **ಎಸ್. ಉಮೇಶ್** | ಆಕ್ಟೀವ್ ಪವರ್ |
| **ಟಿ.ಎನ್. ರಘು** | ಫಿನಿಷಿಂಗ್ ಸಿಸ್ಟಂಸ್ |
| **ಆರ್.ಎಸ್. ಪ್ರಶಾಂತ್** | ಓಂ ಸೂಪರ್ ಸೀಲ್ಸ್ |
| **ಬಿ.ಎನ್.ಜಿ. ಪ್ರಸಾದ್** | ಲೆಕ್ಕ ಪರಿಶೋಧಕರು |
| **ಬಿ.ಎನ್.ಜಿ. ಕುಮಾರ್** | ಪ್ರಸುನ್‌ಮ್ಯಾನೇಜ್‌ಮೆಂಟ್ ಸರ್ವೀಸ್ |
| **ವಿ. ಅರುಣ್, ವಿ. ಅಶೋಕ್** | ಎಸ್.ವಿ. ಎಂಟರ್‌ಪ್ರೈಸಸ್ |
| **ಎಸ್. ಚಂದ್ರಶೇಖರ್** | ಪದ್ಮಾಂಜಲಿ ಎಂಟರ್ ಪ್ರೈಸಸ್ |
| **ಹೆಚ್.ಕೆ. ಶಶಿಧರ್** | ಹಿರಿಯ ಅಭಿವೃದ್ಧಿ ಅಧಿಕಾರಿ, LIC |
| **ಭೀಮೇಶ್ವರ ಶರ್ಮಾ ಮಕ್ಕಳು** | ಶುಭಾಶಯ |
| **ಕೆ. ಮಂಜುನಾರಾಯಣ್/ ಕೆ. ಶಿವರಾಂ** | ಸಿಟಿ ಸ್ಟೇಷನರ್ಸ್ |
| **ಎಂ. ಆರ್. ರವಿಶಂಕರ್** | ಯಶಸ್ವಿನಿ ಬಿಲ್ಡ್‌ಟೆಕ್ |
| **ಬಿ. ಶ್ರೀಧರ್** | ಶ್ರೀಗಿರಿ ಪೆಸ್ಟ್ ಕಂಟ್ರೋಲ್ ಸರ್ವೀಸಸ್ |
| **ಎ.ಎಲ್. ಸುಂದರಮೂರ್ತಿ** | ಶುಭಾಶಯಗಳು |
| **ಎ. ಶ್ರೀನಿವಾಸ ಕುಟುಂಬ** | ಶುಭಾಶಯಗಳು |
| **ಬಿ.ಕೆ. ಗಣೇಶ ಕುಮಾರ್** | ಸ್ಟುಡಿಯೋ – 69 |
| **ಆಕ್ವಾ ಸಾಫ್ಟ್, ರಾಜಶ್ರೀ ಸಿಸ್ಟಂಸ್** | |

## ಅಭಿನಂದನೆ

ಸಂಘದ ಸದಸ್ಯ ಶ್ರೀ ಮೋಹನ್ ಆರ್.ಪಿ.ರವರ ಪುತ್ರ ಶ್ರೀ ಸುಮುಖರವರು NITK, ಸುರತ್ಕಲ್‌ನಲ್ಲಿ ಬಿ.ಟೆಕ್ ಪದವಿಯನ್ನು ಈ ಬಾರಿ ಪಡೆದಿರುತ್ತಾರೆ. ಸಂಘವು ಇವರಿಗೆ ಶುಭ ಹಾರೈಸುತ್ತದೆ.

## ನಮ್ಮನ್ನಗಲಿದ ನಮ್ಮವರಿಗೆ ಸಂಘದ ಶ್ರದ್ಧಾಂಜಲಿ

ಆರ್.ಕೆ. ಶಿವಪ್ರಸಾದ್, ಹಿರಿಯ ಸದಸ್ಯರು, 28–10–2016

# ಮೇಲುಕೋಟೆ ಪ್ರವಾಸದ ಛಾಯಾಚಿತ್ರಗಳು

ಚಿತ್ರಕೃಪೆ : ಎನ್. ಶಿವಕುಮಾರ್










# ಮೇಲುಕೋಟೆ ಪ್ರವಾಸ

**ಪ**ರಿಚರಣ ಸಂಘವು ಎಂದಿನಂತೆ ಈ ವರ್ಷವೂ ಒಂದು ದಿನದ ಸತತ ನಾಲ್ಕನೇ ಪ್ರವಾಸವನ್ನು ತಾ. 27–11–2016ರಂದು ಮೇಲುಕೋಟೆ ಮತ್ತು ಕೆರೆ ತೋಂಡೂರು ಜಾಗಕ್ಕೆ ಏರ್ಪಡಿಸಿದ್ದರು. ಇದು ಮಂಡ್ಯ ಜಿಲ್ಲೆಯಲ್ಲಿರುವ ಪಾಂಡವಪುರ ತಾಲ್ಲೂಕಿನಲ್ಲಿ ಇದೆ. ಈ ಸಲ 134 ಜನಗಳು ಪಾಲ್ಗೊಂಡಿದ್ದರು. ಮೂರು ದೊಡ್ಡ ಬಸ್‌ಗಳಲ್ಲಿ (AB and C) ಬಸವನಗುಡಿಯ ಕೃಷ್ಣರಾವ್ ಪಾರ್ಕಿನ ಬಳಿಯಿರುವ ದ್ವಾರಕಾಭವನದಿಂದ ಬೆಳಗಿನ 7.00 ಗಂಟೆಗೆ ನಮ್ಮ ಪ್ರಯಾಣ ಶುರುವಾಯಿತು.

ನಾನು ಮತ್ತು ನನ್ನ ಕುಟುಂಬ 'ಬೀ' ಬಸ್ಸಿನಲ್ಲಿ (KA 42 9761) ಶ್ರೀ ವಿ.ಎಸ್. ಮಣಿಯವರ ನೇತೃತ್ವದಲ್ಲಿ ಹೊರಟೆವು. ದಾರಿಯಲ್ಲಿ ಕೆಲವು ಸದಸ್ಯರು ಹತ್ತಿದರು. ಮೈಸೂರು ರಸ್ತೆಯಲ್ಲಿ ಪ್ರಯಾಣಿಸುವಾಗ ಪ್ರತಿಯೊಬ್ಬರಿಗೂ 2 ಕಿತ್ತಳೆಹಣ್ಣು, 1 ಲೀಟರ್ ನೀರಿನ ಬಾಟಲ್, 1 ಚೀಲ, 1 ಕುಲಾವಿ, 1 ಟವಲ್, ಬಿಸ್ಕತ್ತುಗಳನ್ನು ಸುಮಾರು 9–00 ಗಂಟೆಗೆ ಮೈಸೂರು ರಸ್ತೆಯಲ್ಲಿರುವ ಚನ್ನಪಟ್ಟಣದ ಹತ್ತಿರ ಇರುವ ಕೆಂಗಲ್ ಹನುಮಂತಯ್ಯನವರು ನಿರ್ಮಿಸಿದ ಆಂಜನೇಯ ದೇವಸ್ಥಾನದ ಬಳಿ ಬಸ್ ಬಂದು ನಿಂತಿತು. ಅಲ್ಲಿ ಒಂದು ಶಾಮಿಯಾನದಲ್ಲಿ ಉಪಹಾರವನ್ನು ಏರ್ಪಡಿಸಲಾಗಿತ್ತು. ಬಿಸಿಬಿಸಿ ಯಾದ ಮತ್ತು ರುಚಿಯಾದ ಕ್ಯಾರೆಟ್ ಹಲ್ವಾ, ಇಡ್ಲಿ, ವಡೆ, ಪೊಂಗಲ್, ಚಟ್ನಿ, ಸಾಂಬಾರ್ ಮತ್ತು ಕಾಫಿಯನ್ನು ಏರ್ಪಡಿಸ ಲಾಗಿತ್ತು. ಹೊಟ್ಟೆ ತುಂಬ ಬಡಿಸಿದರು. ನಂತರ ಸುಂದರ ಆಂಜನೇಯ ದೇವಸ್ಥಾನದ ದರ್ಶನ. 10–00 ಗಂಟೆಗೆ ಮತ್ತೆ ಹೊರಟ ಬಸ್ಸು ಮೇಲುಕೋಟೆಯ ಕಡೆಗೆ ಹೊರಟಿತು. ನಾವು ಸುಮಾರು 11–30 ಗಂಟೆಗೆ ತಲುಪಿದೆವು. ಎಲ್ಲರಿಗೂ ನಿಂಬೆ ಪಾನಕ (Welcome Drink) ಇದಾದ ನಂತರ ಎಲ್ಲರನ್ನೂ ದೇವಸ್ಥಾನಕ್ಕೆ ಕರೆದೊಯ್ದರು.

**ಇಲ್ಲಿನ ಇತಿಹಾಸ**

ಮೇಲುಕೋಟೆ ಒಂದು ಪುರಾತನ ಪುಣ್ಯ ಸ್ಥಳ. ಬೆಂಗಳೂರಿನಿಂದ ಸುಮಾರು 150 ಕಿ.ಮೀ. ದೂರದಲ್ಲಿರುವ ಮಂಡ್ಯದಿಂದ 50 ಕಿ.ಮೀ. ದೂರದಲ್ಲಿರುವ ಈ ಸ್ಥಳವನ್ನು ಯಾದವಗಿರಿ, ಯದು ಶೈಲದ್ವೀಪ ಅಥವಾ ಯದುಗಿರಿ ಎಂದೂ ಕರೆಯುತ್ತಾರೆ. ಇದು ಬೆಟ್ಟ ಮತ್ತು ಗುಡ್ಡದ ಮೇಲೆ ಕಟ್ಟಿರುವ ಸುಂದರ ದೇವಸ್ಥಾನ ಇದನ್ನು ತಿರುನಾರಾಯಣಪುರಂ ಎಂದೂ ಕರೆಯುತ್ತಾರೆ. ದಕ್ಷಿಣ ಭಾರತದ ಹೆಸರಾಂತ ತತ್ವಜ್ಞಾನಿ, ಶ್ರೀ ವೈಷ್ಣವ ರಾಮಾನುಜಾಚಾರ್ಯರು ಈ ನೆಲೆಯಲ್ಲಿ ಸುಮಾರು 12ನೇ ಶತಮಾನದಲ್ಲಿ ನೆಲೆಸಿದ್ದರಂತೆ. ಇದರಿಂದ ಈ ನೆಲೆಯು ಮಂಡ್ಯ ಐಯ್ಯಂಗಾರರ ನೆಲೆಯಾಯಿತು. ಇವರುಗಳು ಈ ಜಾಗವನ್ನು ಹೊಯ್ಸಳ ರಾಜ ವಿಷ್ಣುವರ್ಧನನಿಂದ ಪಡೆದು ನಂತರ ವೇದ, ಭಾರತದ ವಿಜ್ಞಾನ ಮತ್ತು ಸಂಸ್ಕೃತದ ಕೇಂದ್ರವನ್ನಾಗಿಸಿದ್ದಾರೆ. ರಾಜ ವಿಷ್ಣುವರ್ಧನ ಅಷ್ಟ ಗ್ರಾಮದ ಆಚಾರ್ಯರನ್ನು ನಂಬಿದವನಾಗಿದ್ದವನು.

ಇಲ್ಲಿ ಎರಡು ಮುಖ್ಯವಾದ ದೇವಸ್ಥಾನಗಳಿವೆ. ಮೊದಲನೆಯದು ಚೌಕಟ್ಟಿನ ಜಾಗದಲ್ಲಿ ಕಟ್ಟಿರುವ ದೊಡ್ಡ ದೇವಸ್ಥಾನ. ಇಲ್ಲಿ ಸುಂದರವಾದ ಚೆಲುವ ನಾರಾಯಣಸ್ವಾಮಿ ಅಥವಾ ತಿರುನಾರಾಯಣ ದೇವರ ವಿಗ್ರಹ. ಉತ್ಸವ ಮೂರ್ತಿಯನ್ನು ಚೆಲುವ ಪಿಳ್ಳೆರಾಯ ಎಂದು ಕರೆಯುವ ವಾಡಿಕೆ. ಇದರ ಮೂಲ ಹೆಸರು ರಾಮಾಪ್ರಿಯ ಎಂದು. ಏಕೆಂದರೆ ರಾಮ ಮತ್ತು ಅವರ ಮಗ ಕುಶ ಈ ವಿಗ್ರಹವನ್ನು ಪೂಜಿಸುತ್ತಿದ್ದರೆಂಬ ನಂಬಿಕೆ. ಎರಡನೆಯದು ಬೆಟ್ಟದ ಮೇಲೆ ಇರುವ ಸುಂದರವಾದ ಯೋಗಾ ನರಸಿಂಹದೇವರ ಗುಡಿ. ಪ್ರಹ್ಲಾದನು ಪ್ರತಿಷ್ಠಾಪಿಸಿದ ವಿಗ್ರಹವೆಂದು ಜನರ ನಂಬಿಕೆ. ರಾಜ ಕೃಷ್ಣರಾಜಒಡೆಯರ್ ಚಿನ್ನದ ಕಿರೀಟವನ್ನು ಭಕ್ತಿಯಾಗಿ ಸಮರ್ಪಿಸಿದ್ದಾರೆ. ಈ ದೇವಸ್ಥಾನಗಳು ಈ ಜಾಗವನ್ನು ಪ್ರಸಿದ್ಧವನ್ನಾಗಿ ಮಾರ್ಪಡಿಸಿದೆ.

ಈ ದೇವಸ್ಥಾನದಲ್ಲಿ ಕಲ್ಯಾಣಿ ತೀರ್ಥವೆಂಬ ಕೊಳವಿದೆ. ದೇವಸ್ಥಾನದ ಆವರಣದಲ್ಲಿ ಶ್ರೀ ವೇದ ವೇದಾಂತ ಬೋಧಿನಿ ಸಂಸ್ಕೃತ ಮಹಾಪಾಠಶಾಲೆ 1854ನೇ ಇಸವಿಯಿಂದ ಇದೆ.

**ವೈರಮುಡಿ ಉತ್ಸವ** : ವಜ್ರದ ಕಿರೀಟವನ್ನು ಧರಿಸಿದ ಚೆಲುವ ನಾರಾಯಣ ಸ್ವಾಮಿಯನ್ನು 3/4ನೇ ತಿಂಗಳಿನಲ್ಲಿ ಚಿನ್ನದ ಗರುಡನ ವಿಗ್ರಹದ ಮೇಲೆ ಕೂಡಿಸಿ ಉತ್ಸವ ಮಾಡುವುದು ಒಂದು ವಾಡಿಕೆ. 4ರಿಂದ 5 ಲಕ್ಷ ಜನರು ಈ ಉತ್ಸವವನ್ನು ವೀಕ್ಷಿಸುತ್ತಾರೆ. 13 ದಿನದ ಜಾತ್ರೆ ನಡೆಯುತ್ತದೆ.

ದೇವಸ್ಥಾನದಲ್ಲಿ ಚೆಲುವ ನಾರಾಯಣಸ್ವಾಮಿಯ ದರ್ಶನವನ್ನು ಪಡೆದೆವು. ಪೂಜೆಯಾದ ನಂತರ ಎಲ್ಲರೂ ಬಂದು ಒಂದು ಜಾಗದಲ್ಲಿ ಕಲೆತೆವು. ನಂತರ 2/3 ಪಂಕ್ತಿಯಲ್ಲಿ ಊಟ. ಆಹಾ ಮೃಷ್ಟಾನ್ನ ಭೋಜನ. 2 ಪಲ್ಯ 2 ಕೋಸಂಬರಿ, ಹಪ್ಪಳ, ಅನ್ನ, ಸಾರು, ತರಕಾರಿ ಸಾಂಬರ್, ಸಕ್ಕರೆ ಪೊಂಗಲ್, ಪುಳಿಯೋಗರೆ, ಜಿಲೇಬಿ, ಚಂಪಾಕಲಿ, ಗಸಗಸೆ ಪಾಯಸ, ಆಂಬೋಡೆ, ಮೈಸೂರು ಮತ್ತು ಬೀಡಾ, ಸಾಕಾ ಇನ್ನು ಬೇಕಾ! ನಂತರ ಸ್ವಲ್ಪ ವಿಶ್ರಾಂತಿ.

ನಂತರ ಗುಂಪಿನಲ್ಲಿ ಸುತ್ತಮುತ್ತಲ ಜಾಗಕ್ಕೆ ಭೇಟಿ. ಅಕ್ಕ ಮತ್ತು ತಂಗಿಯ ಕೊಳ. ವಿಶ್ರಾಂತಿ ಸುಮಾರು 4 ಗಂಟೆಗೆ ಕಾಫಿ. ಜೊತೆಗೆ ಎಲ್ಲರಿಗೂ ಒಂದು ಡಬ್ಬಿ ವೆಜಿಟೇಬಲ್ ಉಪ್ಪಿಟ್ಟು ಮತ್ತು ಒಂದು ಡಬ್ಬಿ ಮೊಸರನ್ನ ವಿತರಣೆ. ಇದು ರಾತ್ರಿಯ ಊಟಕ್ಕೆ. ನಂತರ ಬಸ್ಸಿನಲ್ಲಿ ಪ್ರಯಾಣ ಕೆರೆ ತೋಂಡೂರು ಕಡೆಗೆ. ದುರದೃಷ್ಟವಶಾತ್ ರಸ್ತೆಯಲ್ಲಿ ಬಸ್ಸು ಹೋಗದ ಕಾರಣ ಮತ್ತು ನಾವು ದೂರ ನಡೆಯಲಾಗದ ಕಾರಣ ದಾರಿಯಲ್ಲಿ ಸಿಕ್ಕಿದ ನಂಬಿನಾರಾಯಣ ದೇವಸ್ಥಾನ ಮತ್ತು ಶ್ರೀ ಗೋಪಾಲಕೃಷ್ಣ ದೇವಸ್ಥಾನಕ್ಕೆ ಭೇಟಿ ನೀಡಿದೆವು.

ಶ್ರೀ ಗೋಪಾಲ ಕೃಷ್ಣ ದೇವಸ್ಥಾನದ ಆವಣರದಲ್ಲಿ ಎಲ್ಲರಿಗೂ ಗುಂಡಪ್ಪ ಹೋಟಲಿನಲ್ಲಿ ತಯಾರಿಸಿದ ಬಾದಾಮಿ ಬರ್ಫಿ, ಚೌಚೌ, ಸೌತೇಕಾಯಿ, ಶ್ರೀನಿವಾಸ ಬೇಕರಿಯ ಖಾರದ ಕಡಲೆಬೀಜ, ಖಾರದ ಅವಲಕ್ಕಿ, ಕೋಡುಬಳೆ, ಬಣ್ಣೆ ಮುರುಕು ವಿತರಣೆ.

ಉಂಡೂ ಹೋದ ಕೊಂಡೂ ಹೋದ ಎಂಬಂತೆ ಎಲ್ಲವನ್ನೂ ತೆಗೆದುಕೊಂಡು ತಿಂದು ಮತ್ತೆ ಕೆಲವನ್ನು ಚೀಲದಲ್ಲಿ ಇಟ್ಟುಕೊಂಡು ಬಸ್ಸಿನಲ್ಲಿ ಕೂತು ಪ್ರಯಾಣ ಬೆಳೆಸಿದವು ನಮ್ಮ ನಮ್ಮ ಮನೆಯ ಕಡೆ ಬೆಂಗಳೂರಿಗೆ.

ದಾರಿಯಲ್ಲಿ ಮದ್ದೂರು ಹೋಟಲಿನಲ್ಲಿ ನಮ್ಮ ನಮ್ಮ ಖರ್ಚಿನಲ್ಲಿ ಕಾಫೀ, ಮದ್ದೂರು ವಡೆ. 9–00 ಗಂಟೆಗೆ ಅಲ್ಲಿಂದ ಹೊರಟ ಬಸ್ಸುಗಳು ಬೆಂಗಳೂರು ತಲುಪಿದ್ದು 11–30 ರಾತ್ರಿ.

ಸುಖಕರ ಪ್ರಯಾಣ, ಸುಖವಾಗಿ ದಿನ ಕಳೆದ ಸದಸ್ಯರುಗಳು, ಸ್ನೇಹಿತರು ಮತ್ತು ಕುಟುಂಬದವರು, ತುಂಬಿದ ಹೊಟ್ಟೆ, ಮರೆಯಲಾಗದ ದಿನ, ಶ್ರಮವಹಿಸಿದ ಸಂಘದ ಕಮಿಟಿ ಸದಸ್ಯರುಗಳು, ಎಲ್ಲರಿಗೂ ನನ್ನ ಅನಂತಾನಂತ ವಂದನೆಗಳು.

ಶ್ರೀನಿವಾಸಮೂರ್ತಿ
9449445311

# ಮೇಲುಕೋಟೆ ಪ್ರವಾಸದ ಛಾಯಾಚಿತ್ರಗಳು

ಚಿತ್ರಕೃಪೆ : ಎನ್. ಶಿವಕುಮಾರ್


















# ಮೇಲುಕೋಟೆ ಕ್ಷೇತ್ರ ಪರಿಚಯ

ಶ್ರೀ ರಂಗಮಂಗಳಮಣಿಂ ಕರುಣಾನಿವಾಸಂ
ಶ್ರೀ ವೆಂಕಟಾದ್ರಿಶಿಖರಾಲಯಕಾಳಮೇಘಂ
ಶ್ರೀಹಸ್ತಿಶೈಲಶಿಖರೋಜ್ವಲಪಾರಿಜಾತಂ
ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ

ಶ್ರೀರಂಗದಲ್ಲಿ ಮಂಗಳಕರನಾಗಿ, ಮಣಿಪ್ರಿಯನಾಗಿ, ಕರುಣಾಕರ ನಾಗಿರುವ ಶ್ರೀರಂಗನಾಥ; ತಿರುಮಲೆಯ ಶಿಖರದಲ್ಲಿ ಕರಿಮೊಡದಂತೆ ಪ್ರಕಾಶಿಸುವ ಶ್ರೀ ಶ್ರೀನಿವಾಸ; ಹಸ್ತಿಶೈಲವೆನಿಸುವ ಕಂಚಿಯ ಶಿಖರದಲ್ಲಿ ಪಾರಿಜಾತಪುಷ್ಪದಂತೆ ಬೆಳಗುವ ಶ್ರೀ ವರದರಾಜ; ಸಿರಿಯ ರಮಣ, ಯದುಶೈಲದ ದೀಪವಾಗಿರುವ ತಿರುನಾರಾಯಣಪುರದ ಶ್ರೀಮನ್ನಾರಾಯಣ! ಇವರುಗಳನ್ನು ನಮಿಸುತ್ತೇವೆ.

ಶ್ರೀರಂಗದ 'ನಡೆ', ತಿರುಪತಿಯ 'ವಡೆ', ಕಂಚಿಯ 'ಕೊಡೆ', ಮೇಲುಕೋಟೆಯ 'ಮುಡಿ' ? ಇವೂ ಅಷ್ಟೇ ಪ್ರಸಿದ್ಧವಾಗಿವೆ.

**ಪೌರಾಣಿಕ ಹಿನ್ನೆಲೆ**

ಪೌರಾಣಿಕವಾಗಿ 'ಯಾದವಗಿರಿ' ಎಂಬ ಹೆಸರಿರುವ ಮೇಲುಕೋಟೆ, ಕಾವೇರಿ ನದಿಯ ಉತ್ತರದಲ್ಲಿದೆ. ಅಚ್ಚರಿ ಮೂಡಿಸುವ ವಿಷಯವೆಂದರೆ, ಸಹ್ಯಾದ್ರಿ ಪರ್ವತಶ್ರೇಣಿಯ ಬೆಟ್ಟದ ಸಾಲುಗಳು ಆದಿಶೇಷನಂತೆ ಕಾಣುವುದು. ಮೇಲುಕೋಟೆಯಲ್ಲಿ ಬದರಿನಾರಾಯಣನು ತೊಡೆಯ ಮೇಲೆ ಲಕ್ಷ್ಮಿಯನ್ನು ಕೂರಿಸಿಕೊಂಡು ದ್ವಯಮಂತ್ರವನ್ನು ಉಪದೇಶಿಸಿದ್ದಾನೆ. ಈ ಬದರಿನಾರಾಯಣನ ದೇವಾಲಯದ ಎದುರಿಗೆ ಬದರೀವೃಕ್ಷವಿದೆ. ಹೀಗಾಗಿ, ಈ ಕ್ಷೇತ್ರಕ್ಕೆ 'ದಕ್ಷಿಣದ ಬದರಿಕಾಶ್ರಮ' ಎಂಬ ಹೆಸರು ಬಂದಿತು. ಇಲ್ಲಿ, 'ತಿರುನಾರಾಯಣ' ಮೂಲ ವಿಗ್ರಹವಲ್ಲದೆ, 'ಬದರಿ ನಾರಾಯಣ'ನ ಸನ್ನಿಧಿಯೂ ಪ್ರತ್ಯೇಕವಾಗಿದೆ. ಇದೇ ಇಲ್ಲಿಯ ವಿಶೇಷಗಳಲ್ಲೊಂದು. ಇಲ್ಲಿ ಮೇಧಾತಿಥಿ, ಪ್ರಹ್ಲಾದ ಅವರುಗಳೂ ಸಹ ದತ್ತಾತ್ರೇಯರಿಂದ ವೇದವೇದಾಂಗಗಳನ್ನು ಅಧ್ಯಯನ ಮಾಡಿದರು. ದ್ವಾಪರಯುಗದಲ್ಲಿ ಯಾದವರು ಬಂದು ನಾರಾಯಣನನ್ನು ಪೂಜಿಸಿದ್ದರಿಂದ 'ಯಾದವಾದ್ರಿ' ಆಯಿತು. ಕಲಿಯುಗದಲ್ಲಿ ಶ್ರೀ ರಾಮಾನುಜರು ಬಂದು ಜೀರ್ಣೋದ್ಧಾರ ಮಾಡಿದ್ದರಿಂದ 'ಯತಿಶೈಲ' ಎಂದು ಪ್ರಸಿದ್ಧವಾಯಿತು. ನಾರದ, ವ್ಯಾಸ, ಭೃಗು ಮತ್ತು ಶಾಂಡಿಲ್ಯ ಮುಂತಾದವರು ಇಲ್ಲಿ ಜ್ಞಾನವನ್ನು ಪಡೆದದ್ದರಿಂದ ಇದು 'ಜ್ಞಾನ ಮಂಟಪ'ವೆನಿಸಿತು. ಇಲ್ಲಿ ಮಹಾಲಕ್ಷ್ಮಿಯು 'ಯದುಗಿರಿ ನಾಯಕಿ' ಎಂಬ ಹೆಸರಿನಲ್ಲಿ ಅರಾಧಿಸಲ್ಪಡುತ್ತಾಳೆ. ಲಕ್ಷ್ಮಿಯು ಇಲ್ಲಿ 'ಅಹಿ' ಎಂಬ ಅಸುರರನ್ನು ಸಂಹರಿಸಿದಳೆಂಬುದು ಪುರಾಣಗಳಲ್ಲಿ ಪ್ರಸ್ತುತವಾಗಿದೆ. ನಾರದ ಮಹರ್ಷಿಯು ನಾರದೀಯ ಪುರಾಣದಲ್ಲಿ 'ಯಾದವಗಿರಿ' ಮಹಾತ್ಮೆಯನ್ನು ವಿಸ್ತಾರವಾಗಿ ಹೇಳಿದ್ದಾರೆ.

**ತಿರುನಾರಾಯಣನ ಆವಿರ್ಭಾವ**

ಒಮ್ಮೆ ಬ್ರಹ್ಮನ ಮಗನಾದ ಸನತ್ಕುಮಾರನು ಭೂಲೋಕದಲ್ಲಿ ತಾನು ಆರಾಧಿಸಲು ಮೂರ್ತಿಯೊಂದು ಬೇಕೆಂದು ಬ್ರಹ್ಮನನ್ನು ಬೇಡಲು, ಬ್ರಹ್ಮನು ತಾನು ಆರಾಧಿಸುತ್ತಿದ್ದ ತಿರುನಾರಾಯಣನ ಮೂರ್ತಿಯನ್ನೇ ಮಗನಿಗೆ ಕೊಟ್ಟನು. ಮತ್ತೆ ಬ್ರಹ್ಮನು ತನಗೊಂದು ಅರ್ಚನಾಮೂರ್ತಿ ಬೇಕೆಂದು ಯೋಚಿ ಸಿದಾಗ, ತಿರುನಾರಾಯಣನು ತನ್ನ ಹೃದಯದಿಂದ ಶ್ರೀ ಭೂಸಹಿತನಾದ ಸುಂದರ ಮೂರ್ತಿಯನ್ನು ತೆಗೆದುಕೊಟ್ಟನು. ಇವನೇ ಚೆಲುವರಾಯಸ್ವಾಮಿ. ಸನತ್ಕುಮಾರನು ಸತ್ಯ ಲೋಕದಿಂದ ಮೇರು ಪರ್ವತ, ಕೈಲಾಸ ಪರ್ವತ, ಹಿಮ ವತ್ಪರ್ವತಗಳನ್ನು ದಾಟಿ ಇಲ್ಲಿಗೆ ಬಂದು ತಿರುನಾರಾಯಣನ ಮೂರ್ತಿಯನ್ನು ಇಲ್ಲಿ ಪ್ರತಿಷ್ಠಾಪಿಸಿದನು.



**ಚೆಲುವರಾಯಸ್ವಾಮಿ ಭೂಲೋಕಕ್ಕೆ ಬಂದದ್ದು**

ತ್ರೇತಾಯುಗದಲ್ಲಿ, ರಾವಣಸಂಹಾರ ನಂತರ, ಶ್ರೀರಾಮ ಚಂದ್ರನು ಪಟ್ಟಾಭಿಷಿಕ್ತನಾಗಿ, ಸೀತೆಯನ್ನು ಪಡೆಯಲು ತನಗೆ ಸಹಾಯಕರಾದವರೆಲ್ಲರಿಗೂ ಉಡುಗೊರೆಗಳನ್ನು ಕೊಟ್ಟನು. ವಿಭೀಷಣನ ಮೇಲೆ ಅತ್ಯಂತ ಪ್ರೀತಿಯಿಂದ ತನ್ನ ಆರಾಧ್ಯ ದೈವವಾದ ಶ್ರೀರಂಗನಾಥನಮೂರ್ತಿಯನ್ನೇ ಕೊಟ್ಟುಬಿಟ್ಟನು. ಆಗ, ಚತುರ್ಮುಖ ಬ್ರಹ್ಮನು ತಾನು ಆರಾಧಿಸುತ್ತಿದ್ದ ಚೆಲುವರಾಯ ಸ್ವಾಮಿಯನ್ನು ಶ್ರೀರಾಮನಿಗೆ ಆರಾಧನೆಗಾಗಿ ಕೊಟ್ಟನು. ಅಂದಿನಿಂದ ಚೆಲುವರಾಯ 'ರಾಮಪ್ರಿಯ'ನಾದನು. ಶ್ರೀರಾಮನ ನಂತರ ಕುಶಮಹರಾಜನು ಇವನನ್ನು ಆರಾಧಿಸಿದನು. ಕುಶನ ಮಗಳು ಯದುಕುಲದ ಯದು ಶೇಖರನ ಮಡದಿಯಾದಾಗ, ಅವಳಿಗೆ ಕೊಟ್ಟ ಬಳುವಳಿಯೊಂದಿಗೆ ಚೆಲುವರಾಯನಾದ ರಾಮ ಪ್ರಿಯನು ಸೂರ್ಯವಂಶದಿಂದ ಯದುವಂಶಕ್ಕೆ ಸೇರಿದನು.

**ವೈರಮುಡಿ ಮೇಲುಕೋಟೆಗೆ ಬಂದದ್ದು**

ಶ್ರೀವೈಕುಂಠದಲ್ಲಿ ಭಗವಂತನು ಯೋಗನಿದ್ರೆಯಲ್ಲಿದ್ದಾಗ ಅವನ ಕಿರೀಟವನ್ನು ಪ್ರಹ್ಲಾದನ ಮಗನಾದ ವಿರೋಚನನು ಅಪಹರಿಸಿ, ಪಾತಾಳದಲ್ಲಿ ಅಡಗಿಸಿದನು. ಭಕ್ತರ ಅಪೇಕ್ಷೆಯಂತೆ ಗರುಡನು ಪಾತಾಳಕ್ಕೆ ಹೋಗಿ ವಿರೋಚನನನ್ನು ಜಯಿಸಿ, ಕಿರೀಟದೊಂದಿಗೆ ಹಿಂದಿರುಗುತ್ತಿದ್ದಾಗ ವೃಂದಾವನದಲ್ಲಿ ಶ್ರೀಕೃಷ್ಣನನ್ನು ಕಂಡು ಕಿರೀಟವನ್ನು ಅವನಿಗರ್ಪಿಸಿದನು. ಶ್ರೀ ಕೃಷ್ಣನು ಅದನ್ನು ತನ್ನ ಮನೆದೇವರಾದ ಚಲುವರಾಯನಿಗೆ ಒಪ್ಪಿಸಿದನು.

ಒಮ್ಮೆ ಬಲರಾಮನು ತೀರ್ಥಯಾತ್ರೆ ಮಾಡುತ್ತಾ ಯಾದವಾದ್ರಿಗೆ ಬಂದಾಗ, ತಿರುನಾರಾಯಣನ ದರ್ಶನದಲ್ಲಿ, ತನ್ನ ಮನೆಯಲ್ಲಿರುವ ಚೆಲುವರಾಯನೂ ಹೀಗೆಯೇ ಇರುವನೆಂದು ಆಶ್ಚರ್ಯಪಟ್ಟು, ದ್ವಾರಕೆಗೆ ತೆರಳಿ, ಶ್ರೀ ಕೃಷ್ಣನೊಂದಿಗೆ ಚೆಲುವರಾಯಸ್ವಾಮಿಯನ್ನು ಕರೆತಂದು ಮೇಲುಕೋಟೆಯಲ್ಲಿ ಬಿಜಯ ಮಾಡಿಸಿದನು.

ತಿರುನಾರಾಯಣಸ್ವಾಮಿಯು ಬ್ರಹ್ಮನ ಮಗನಾದ ಸನತ್ಕುಮಾರನಿಂದ ಮೇಲುಕೋಟೆಗೆ ಬಂದನು. ಚೆಲುವರಾಯ ಸ್ವಾಮಿಯು ಬ್ರಹ್ಮನಿಂದ ರಾಮನಿಗೆ, ರಾಮನಿಂದ ಕೃಷ್ಣನಿಗೆ, ಕೃಷ್ಣನಿಂದ ಯದುಗಿರಿಗೆ ಬಂದು ಸೇರಿದನು. ಹೀಗಾಗಿ ಭಕ್ತರಿಗಾಗಿ ತಿರುನಾರಾಯಣ ಸ್ವಾಮಿಯು ಮೂಲಮೂರ್ತಿಯಾಗಿಯೂ, ಶ್ರೀ ಚೆಲುವರಾಯಸ್ವಾಮಿಯು ಉತ್ಸವಮೂರ್ತಿಯಾಗಿಯೂ ಯಾದವಗಿರಿಯಲ್ಲಿ ಒಂದೆಡೆ ಸೇರಿದರು.

**ಕೆರೆ ತೊಣ್ಣುರು, ನಂಬಿ ನಾರಾಯಣಸ್ವಾಮಿ ಮತ್ತು ನರಸಿಂಹಸ್ವಾಮಿ ದೇವಾಲಯಗಳು**

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಚಾರಕಾರ್ಯಕ್ಕೆ ಧಕ್ಕೆ ಉಂಟಾದ ಸಮಯದಲ್ಲಿ, ಶ್ರೀ ರಾಮಾನುಜಾಚಾರ್ಯರು, ತಮಿಳುನಾಡಿನ ಶ್ರೀರಂಗಂ ಕ್ಷೇತ್ರದಿಂದ ಮೈಸೂರು ಪ್ರಾಂತ್ಯಕ್ಕೆ ತಲೆಮರೆಸಿಕೊಂಡು ಬರಬೇಕಾದ ಅನಿವಾರ್ಯ ಒದಗುತ್ತದೆ. ಆ ಸಮಯದಲ್ಲಿ ಶ್ರೀ ರಾಮಾನುಜರು ಬಂದು ನೆಲೆಸಿದ ಮೊದಲ ಸ್ಥಳವೇ 'ತೊಣ್ಣೂರು'. ಆ ಕಾಲದಲ್ಲಿ ಈ ಕ್ಷೇತ್ರವು ಜೈನ ರಾಜನಾದ ವಿಷ್ಣುವರ್ಧನ ರಾಜನ ಆಳ್ವಿಕೆಯಲ್ಲಿದ್ದು,



ರಾಜನು ಶ್ರೀ ರಾಮಾನುಜರಿಗೆ ಆಶ್ರಯ ನೀಡುತ್ತಾನೆ. ರಾಜನು ತನ್ನ ಮಗಳ ಮನೋವ್ಯಾದಿಯಿಂದ ವ್ಯಾಕುಲಗೊಂಡು ಯತಿಗಳ ಮೊರೆ ಹೊಕ್ಕಾಗ, ಅವರ ಸಂಕಲ್ಪದಂತೆ ಆ ಬಾಲೆ ಹತ್ತಿರದ ಸರೋವರದಲ್ಲಿ ಮಿಂದ ನಿಮಿತ್ತ, ಸಂಪೂರ್ಣ ಗುಣಹೊಂದುತ್ತಾಳೆ. ಆ ಸರೋವರವೇ ಇಂದಿನ 'ಕೆರೆ ತೊಣ್ಣೂರು'.

ನಂಬಿ ನಾರಾಯಣ ದೇವಾಲಯ ತೊಣ್ಣೂರಿನಲ್ಲಿ ಶ್ರೀ ರಾಮಾನುಜರು ಸ್ಥಾಪಿಸಿದ ಎರಡು ದೇವಾಲಯಗಳಲ್ಲೊಂದು. ಸುಂದರ ನಾರಾಯಣ ಮೂರ್ತಿ. ಸಾಯಂಕಾಲ ಸಮಯದಲ್ಲಿ, ಸೂರ್ಯಕಿರಣಗಳು, ದೇವಾಲಯದ ಧ್ವಜಸ್ತಂಭದ ಮೇಲೆ ಬಿದ್ದು ಪ್ರತಿಬಿಂಬಿಸಿ, ನಾರಾಯಣ ಮೂರ್ತಿಯ ಮುಖದ ಮೇಲೆ ಬೀಳುವುದು ಈ ದೇವಾಲಯದ ವಿಶೇಷ.

ನರಸಿಂಹಸ್ವಾಮಿ ದೇವಾಲಯ ಶ್ರೀ ರಾಮಾನುಜರು ಸ್ಥಾಪಿಸಿದ ಮತ್ತೊಂದು ದೇವಾಲಯ ? ನಂಬಿನಾರಾಯಣ ದೇವಾಲಯದ ಹಿಂಭಾಗದಲ್ಲಿದೆ. ಈ ದೇವಾಲಯದಲ್ಲಿ ಶ್ರೀ ರಾಮಾನುಜರು ಆದಿಶೇಷನ ರೊಪದಲ್ಲಿ ನೆಲೆಸಿದ್ದಾರೆ ಎಂಬ ವಿಷಯವನ್ನು ತಿಳಿಸಿ, ಮೇಲುಕೋಟೆ, ತೊಣ್ಣೂರು ಕ್ಷೇತ್ರಗಳ ಪರಿಚಯವನ್ನು ದೇವಾಲಯದ ಅರ್ಚಕರೇ ವಿವರಿಸಿದಾಗ ಆದ ಅನುಭವ – ರೋಮಾಂಚಕ! ಧನ್ಯತಾ ಭಾವ!!



**ಬಿ.ಎನ್.ಗೋವಿಂದ ಪ್ರಸಾದ್**
ಮೊ : 98451 28229

# ಪ್ರವಾಸ – ಅನಿಸಿಕೆ

ನಮ್ಮ ಬೃಹಚರಣ ಸಂಘವು 27–11–2016ರಂದು ಏರ್ಪಡಿಸಿದ್ದ ಒಂದು ದಿನದ ಪ್ರವಾಸದಲ್ಲಿ ನಾನು ಭಾಗವಹಿಸಿ, ಆದ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇವೆ. ಅಂದು ನಿಗದಿತ ಸಮಯಕ್ಕೆ ಸರಿಯಾಗಿ ಬೆಂಗಳೂರಿನಿಂದ ಮಂಡ್ಯ ಜಿಲ್ಲೆ ಮೇಲುಕೋಟೆ ಚೆಲುವ ನಾರಾಯಣಸ್ವಾಮಿ ದೇವಸ್ಥಾನ ಹಾಗೂ ಕೆರೆ ತೊಂಡೂರು ನಂಬಿ ನಾರಾಯಣ, ವೇಣುಗೋಪಾಲಸ್ವಾಮಿ ದೇವಸ್ಥಾನಗಳಿಗೆ ಭೇಟಿ ನೀಡಿದ್ದು ಸುಂದರವಾದ ನೆನಪಾಗಿ ಉಳಿಯುತ್ತದೆ.

ಕೆಂಗಲ್ ಹನುಂತರಾಯನ ಸನ್ನಿಧಿಯಲ್ಲಿ ಬೆಳಗಿನ ಉಪಹಾರ ಪುಷ್ಕಳವಾಗಿ ಆದ ನಂತರ ಪ್ರವಾಸ ಮುಂದುವರೆದು ಮೇಲುಕೋಟೆ ತಲುಪಿದ ಕೂಡಲೆ ರುಚಿಯಾದ ನಿಂಬೆ ಪಾನಕ ನಮ್ಮನ್ನು ಸ್ವಾಗತಿಸಿ ನಂತರ ಚೆಲುವನಾರಾಯಣ ಸ್ವಾಮಿಯ ದರ್ಶನ ಮನಸ್ಸಿಗೆ ನೆಮ್ಮದಿ ತಂದಿತು.

ಇಂದಿಗೂ ನೆನಪಿಸಿಕೊಳ್ಳುವ ರುಚಿರುಚಿಯಾದ ಸಿಹಿ ಪೊಂಗಲ್ ಮತ್ತು ಪುಳಿಯೊಗರೆ ಬಾಯಲ್ಲಿ ನೀರೂರಿಸುವ ಶುಚಿಯಾದ ಸಾಂಪ್ರದಾಯಿಕ ಅಡುಗೆಯ ಭೋಜನವನ್ನು ಶಾಮಿಯಾನದಲ್ಲಿ ಮಾಡಿದೆವು. ತಂಡ ತಂಡವಾಗಿ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿ, ವಿಹರಿಸಿದ ನಂತರ ಕಾಫಿ ಕುಡಿದು ಪ್ರವಾಸದ ಸದಸ್ಯರೆಲ್ಲರ ಸಮೂಹ ಸ್ಥಿರ ಛಾಯಾ ಚಿತ್ರವನ್ನು ಪ್ರಸಿದ್ಧ ಚಿತ್ರೀಕರಣ ಸ್ಥಳವಾದ ಅಕ್ಕ–ತಂಗಿ ಕೊಳದ ಪಕ್ಕ ಪ್ರಸಿದ್ಧ ವನ್ಯಜೀವಿ ಛಾಯಾಗ್ರಾಹಕ ಸಂಘದ ಸದಸ್ಯ ಶ್ರೀ ಎನ್. ಶಿವಕುಮಾರ್ ಅವರು ಸೆರೆ ಹಿಡಿದರು.

ಸಂಜೆ ಹೊತ್ತಿಗೆ ಕೆರೆ ತೊಣ್ಣೂರಿನ ನಂಬಿ ನಾರಾಯಣ ಮತ್ತು ವೇಣುಗೋಪಾಲಸ್ವಾಮಿ ದರ್ಶನ ಮಾಡಿ ಬಾಯಿ ಒಗ್ಗರಣೆಯಾಗಿ ವಿವಿಧ ತಿನಿಸುಗಳನ್ನು ತಿನ್ನುತ್ತಾ ರಾತ್ರಿಗಾಗಿ pack ಮಾಡಿದ ಲಘು ಭೋಜನವನ್ನು ತೆಗೆದುಕೊಂಡು ಬೆಂಗಳೂರಿಗೆ ಹಿಂತಿರುಗಿದೆವು. ಸುಸಜ್ಜಿತ ಸುಖಕರವಾದ ಪ್ರವಾಸ ಏರ್ಪಡಿಸಿದ ಸಂಘದ ಅಧ್ಯಕ್ಷ. ಕಾರ್ಯದರ್ಶಿ, ಕಾರ್ಯಕಾರಿ ಸಮಿತಿಯ ಸದಸ್ಯರು ವಿಶೇಷವಾಗಿ ಶ್ರೀ ಎಸ್.ಸಿ. ಶ್ರೀನಿವಾಸ್ ಹಾಗೂ ಅರುಣ್‌ರವರ ಕಾರ್ಯದಕ್ಷತೆಗೆ ಧನ್ಯವಾದಗಳು.



ಒಟ್ಟಾರೆ ಪ್ರವಾಸ ಸೂಪರ್. ನಾವೆಲ್ಲ; ಕೂಡಿ ಹೇಳೋಣ ಹೆಮ್ಮೆಯಿಂದ ನಾವು 'ಬೃಹಚ್ಚರಣರು' ಎಂದು.

**– ಸುಧಾ ಮತ್ತು ಶ್ರೀ ರವಿಶಂಕರ್ ಆರ್.ಪಿ.**
**9449696664**

# ಮೇಲುಕೋಟೆಯ ಪ್ರವಾಸ

ದಿನಾಂಕ 27–11–2016ರಂದು ಭಾನುವಾರ MMDBS ಸಂಘದಿಂದ ಆಯೋಜಿಸಿದ ಒಂದು ದಿನದ ಪ್ರವಾಸವು ಸುಖವಾಗಿ, ರುಚಿಯಾಗಿ, ಶುಚಿಯಾಗಿ, ರಸಭರಿತವಾಗಿ, ಬಾಯಿ ಚಪ್ಪರಿಸುವ ತಿನಿಸುಗಳ ಪ್ರವಾಸದಲ್ಲಿ ಭಾಗವಹಿಸಿದವರೆಲ್ಲರೂ ಒಂದು ನೆನಪಿನ ದಿನವಾಗಿತ್ತು. ಎಲ್ಲಾ ಸದಸ್ಯರುಗಳು ಎಸ್‌ಆರ್‌ಎಸ್ ಬಸ್ಸಿನಲ್ಲಿ ಪ್ರಯಾಣಿಸಿದ್ದು, ನಾನು 'ಎ' ಬಸ್ಸಿನಲ್ಲಿ ಪ್ರಯಾಣಿಸಿದ್ದು, ಒಟ್ಟು 45 ಸದಸ್ಯರುಗಳು ಭಾಗವಹಿಸಿದ್ದರು. ಶ್ರೀ ಕೆಸಿಎನ್, ಶ್ರೀ ಅರುಣ್, ಶ್ರೀ ಬಿ.ಎನ್.ಜಿ. ಪ್ರಸಾದ್ ಹಾಗೂ ಶ್ರೀ ಗಣೇಶ್‌ರವರು ಜವಾಬ್ದಾರಿಯನ್ನು ವಹಿಸಿದ್ದರು. ದೇವಸ್ಥಾನಗಳ ದರ್ಶನದ ಭಾಗ್ಯ, ಹಾಗೂ ಎಲ್ಲ ರೀತಿಯ ತಿಂಡಿ, ಊಟ, ತಂಪಾದ ಪಾನೀಯಗಳು, ಕುರುಕುಲು ತಿಂಡಿಗಳು ಸಮಯಕ್ಕೆ ಸರಿಯಾಗಿ, ವ್ಯವಸ್ಥೆಯು ತುಂಬಾ ಮೆಚ್ಚುಗೆಯಾಗಿತ್ತು. ಸುಮಾರು 8 ವರ್ಷದಿಂದ 80 ವರ್ಷದವರೆಗೆ ಪ್ರಯಾಣಿಸಿದವರೆಲ್ಲರೂ ಬಹಳ ಉತ್ಸಾಹದಿಂದ ಮನರಂಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಆನಂದಪಟ್ಟರು. ಕೆರೆತೊಂಡೂರಿನಲ್ಲಿ ಸಾಮೂಹಿಕ ಛಾಯಾಚಿತ್ರವನ್ನು ಏರ್ಪಡಿಸಿದ್ದು ಅದರಲ್ಲಿ ಎಲ್ಲರೂ ಭಾಗವಹಿಸಿದ್ದರು. ಇನ್ನು whats appನ ಸಂದೇಶದಲ್ಲಿ ಓದಿ ಬಹಳ ಮೆಚ್ಚುಗೆಯಾಯಿತು. ಇದೇ ರೀತಿ ಇನ್ನು ಮುಂದೆ ಹೆಚ್ಚು ಕಾರ್ಯಕ್ರಮಗಳನ್ನು ಪ್ರವಾಸಗಳನ್ನು ಹಮ್ಮಿಕೊಳ್ಳಬೇಕೆಂದು ಇಚ್ಛಿಸುತ್ತೇನೆ. ಎಲ್ಲಾ ವ್ಯವಸ್ಥೆಗಳು ಸುಸಜ್ಜಿತವಾಗಿ, ವ್ಯವಸ್ಥಿತವಾಗಿ ಮತ್ತು ಆರೋಗ್ಯಕರವಾದ ಒಂದು ಪ್ರವಾಸವಾಗಿತ್ತು ಎಂದು ತಿಳಿಸಲು ಹೆಮ್ಮೆಪಡುತ್ತೇನೆ.

**– ಜಿ.ಎನ್. ಶೀಲ ಜಯರಾಂ**
**98805 42444**

* * *

ದಿನಾಂಕ 27–11–2016ನೇ ಭಾನುವಾರ ನಮ್ಮ ಜನಾಂಗ ಅಂದರೆ ಬೃಹಚ್ಚರಣ ಸಂಘದಿಂದ ಮೇಲುಕೋಟೆಗೆ ಒಂದು ದಿನದ ಪ್ರವಾಸವನ್ನು ಏರ್ಪಡಿಸಿದ್ದರು. ನಾವೆಲ್ಲಾ ಆ ದಿನ ಬೆಳಿಗ್ಗೆ ಬಹಳ ಖುಷಿಯಿಂದಲೇ ಬೇಗ ಎದ್ದು ದಿನನಿತ್ಯದ ಕಾರ್ಯಕ್ರಮವನ್ನೆಲ್ಲಾ ಮುಗಿಸಿ, ಮುಂಜಾನೆ 6–30ಕ್ಕೆ ಸೀತಾ ಸರ್ಕಲ್‌ನಲ್ಲಿ ಕಾಯುತ್ತಿದ್ದೆವು. ನಂತರ ಒಬ್ಬೊಬ್ಬರಾಗಿ ಎಲ್ಲರೂ ಬಂದು ಸೇರಿದರು.

ಬೆಳಿಗ್ಗೆ 6–30ಕ್ಕೆ ಕೆಲವರು 'ದ್ವಾರಕಾನಾಥ ಭವನ' ಎದುರು ಸೇರಿದ್ದರು. ಒಟ್ಟು 3 ಬಸ್ಸುಗಳು ಅಲ್ಲಿಂದ ಹೊರಟಿತು. ಅಲ್ಲಿದ್ದವರು ತಮ್ಮ ಬಸ್ಸುಗಳಲ್ಲಿ ಏರಿ ಕುಳಿತರು. ನಂತರ ಬಸ್ಸು ಸೀತಾಸರ್ಕಲ್‌ಗೆ ಬಂದಿತು. ಒಂದೊಂದು ಬಸ್ಸಿಗೂ ಒಬ್ಬೊಬ್ಬರು ಮೇಲ್ವಿಚಾರಕರು ಇದ್ದರು. ನಮ್ಮ 'ಎ' ಬಸ್ಸಿಗೆ 'ಅರುಣ್' ಮೇಲ್ವಿಚಾರಣೆ ಹೊಂದಿದ್ದರು. ನಾವೆಲ್ಲಾ ಬಸ್ಸಿನಲ್ಲಿ ಆಸೀನರಾದ ಮೇಲೆ ಬಸ್ಸುಗಳಲ್ಲಿ ಇದ್ದವರು ದೇವರ ಹೆಸರು ಹೇಳುತ್ತಾ ಇರಲು ಬಸ್ಸು ಚಲಿಸಿತು. ಆಗ ಸುಮಾರು 7–30 ಗಂಟೆಯಾಗಿತ್ತು. ನಂತರ ಬಸ್ಸಿನಲ್ಲಿ ಇದ್ದವರು ಒಬ್ಬೊಬ್ಬರಾಗಿ ತಮ್ಮ ಪರಿಚಯ ಮಾಡಿಕೊಂಡರು. ಆನಂತರ ಹಾಡು ಹಾಸ್ಯಗಳಲ್ಲಿ ತೊಡಗಿಕೊಂಡೆವು. ದಾರಿಯಲ್ಲಿ ಪ್ರತಿಯೊಬ್ಬರಿಗೂ ಒಂದು ಬ್ಯಾಗು, ಹ್ಯಾಟು, ಕರವಸ್ತ್ರ ಕಿತ್ತಳೆ, ಬಿಸ್ಕತ್ತುಗಳನ್ನು ಮತ್ತು ನೀರಿನ ಬಾಟ್ಲುಗಳನ್ನು ಹಂಚಿದರು. ಸುಮಾರು 9–15ಕ್ಕೆ ಕೆಂಗಲ್ ತಲುಪಿದ್ದೆವು. ಅಲ್ಲಿ ಜನಜಂಗುಳಿ ಬಹಳವಿತ್ತು. ಅಲ್ಲಿ ಬೆಳಗ್ಗಿನ ಉಪಹಾರ ವ್ಯವಸ್ಥೆ ಆಗಿತ್ತು. ಶಾಮಿಯಾನದ ಕೆಳಗೆ ಟೇಬಲ್, ಕುರ್ಚಿಯೊಂದಿಗೆ ತಿಂಡಿ ರೆಡಿಯಾಗಿತ್ತು. 'ಕ್ಯಾರೇಟ್ ಹಲ್ವ, ಇಡ್ಲಿ, ಪೊಂಗಲ್, ಚಟ್ನಿ, ಸಾಂಬಾರ್, ವಡೆ, ಕಾಫಿಯನ್ನು ಬಹಳ ಅಚ್ಚುಕಟ್ಟಾಗಿ ಪ್ರತಿಯೊಬ್ಬರಿಗೂ ವಿಶ್ವಾಸದಿಂದ



ಹಂಚಿದರು. ನಂತರ ಉಪಹಾರ ಮುಗಿಸಿ 'ಮೇಲುಕೋಟೆ'ಗೆ ಹೊರಟೆವು. ಮತ್ತೆ ಬಸ್ಸಿನಲ್ಲಿ ನಮ್ಮ ಆಟಪಾಠ, ಹಾಸ್ಯ ಚಟಾಕಿ ಪ್ರಾರಂಭಿಸಿದೆವು ನಾನಾ ತರಹದ ವಿಚಾರದ ಬಗ್ಗೆ ಚರ್ಚೆಗಳಾಯಿತು. ಒಟ್ಟಿನಲ್ಲಿ ಬಹಳ ಸಂತೋಷದಿಂದ ಮುಂದೆ ಸಾಗಿದೆವು. ಸುಮಾರು 12–45ಕ್ಕೆ 'ಮೇಲುಕೋಟೆ' ತಲುಪಿದೆವು ಒಂದೆಡೆ ಎಲ್ಲರಿಗೂ 'ಪಾನಕದ' ವ್ಯವಸ್ಥೆ ಆಗಿತ್ತು. ಆ ಬಿಸಿಲಿನ ಝಳಕ್ಕೆ ಆ ತಣ್ಣಗಿನ ಪಾನಕ ಬಹಳ ಮುದನೀಡಿತು. ನಂತರ ಪಾನಕ ಸೇವನೆ ಮುಗಿಸಿ, ಕೈ ಕಾಲು ಮುಖ ತೊಳೆದು ಮೇಲುಕೋಟೆಯ 'ಚೆಲುವ ನಾರಾಯಣ' ಮತ್ತು 'ಮಹಾಲಕ್ಷ್ಮಿ'ಯ ದರ್ಶನ ಪಡೆಯಲು ಸರತಿಯ ಸಾಲಿನಲ್ಲಿ ಹೋದೆವು. ಚೆಲುವ ನಾರಾಯಣ ನಿಜವಾಗಲೂ ಬಹಳ ಚೆಲುವನೇ. ಅವನ ರೂಪ ಸೌಮ್ಯತೆಯ ಮುಖ ಭಾವ, ಆ ಕರುಣಾಮೂರ್ತಿಯನ್ನು ಮತ್ತು ಅಮ್ಮನವರನ್ನು ವರ್ಣಿಸಲು ಮಾತುಗಳು ಸಾಲದು. ಅಪ್ಪ, ಅಮ್ಮನ ದರ್ಶನದಿಂದ ಪುನೀತರಾಗಿ ಪ್ರಸಾದದೊಂದಿಗೆ ಹೊರಗೆ ಬಂದೆವು.

ಆನಂತರ ದೇವಾಲಯದ ಹತ್ತಿರವೇ ಶಾಮಿಯಾನದ ಕೆಳಗೆ, ಟೇಬಲ್ ಕುರ್ಚಿ, ಬಾಳೆಎಲೆ ಹಾಕಿ ಊಟದ ಏರ್ಪಾಡಾಗಿತ್ತು. ಎಲ್ಲಾ ವ್ಯವಸ್ಥೆಯೂ ಬಹಳ ಅಚ್ಚುಕಟ್ಟಾಗಿ ನಡೆದಿತ್ತು. ಅಲ್ಲಿ ಭರ್ಜರಿ ಊಟದ ವ್ಯವಸ್ಥೆಯೊಂದಿಗೆ ಹಬ್ಬದ ಅಡಿಗೆ ಬಹಳ ಪ್ರೀತಿಯಿಂದ ವಿಶ್ವಾಸದಿಂದ ಕೇಳಿಕೇಳಿ ಬಡಿಸಿದರು. ಸುಮಾರು ಮೂರು, ನಾಲ್ಕು ಪಂಕ್ತಿ ಊಟ ವಾಯಿತು. ಅಡಿಗೆ ಎಲ್ಲವೂ ಬಹಳ ರುಚಿಕಟ್ಟಾಗಿತ್ತು. ಕೆಲವರು ಊರಿನ ಸುತ್ತಮುತ್ತ ಇರುವ ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಬಂದರು. ಆನಂತರ ಕಾಫಿ ವಿತರಿಸಿದರು. ಆಮೇಲೆ 'ಅಕ್ಕ ತಂಗಿ'ಯರ ಕೊಳದ ಬಳಿ Group Photo ತೆಗೆದರು. ರಾತ್ರಿ ಭೋಜನಕ್ಕಾಗಿ, ತರಕಾರಿ ಉಪ್ಪಿಟ್ಟು ಮೊಸರನ್ನದ ಡಬ್ಬಿಗಳನ್ನು ಎಲ್ಲರಿಗೂ ಹಂಚಿದರು.

ಆನಂತರ 'ನಂಬಿನಾರಾಯಣನ ದೇವಾಲಯಕ್ಕೆ ಹೊರಟೆವು. ಆಗ ಬಸ್ಸಿನಲ್ಲಿ 'ಚಕ್ಕುಲಿ ನಿಪ್ಪಟ್ಟು'ಗಳನ್ನು ಹಂಚಿದರು. ನಂಬಿನಾರಾಯಣನ ದರ್ಶನದ ನಂತರ ಎಲ್ಲರಿಗೂ "ಸೌತೆಕಾಯಿ, mixture ಕೊಟ್ಟು ಅಲ್ಲಿಂದ ಪ್ರಯಾಣ ಬೆಂಗಳೂರಿಗೆ ಹೊರಟಿತು. ರಾತ್ರಿ 9–30ಕ್ಕೆ ಬೆಂಗಳೂರು ತಲುಪಿದೆವು. ಒಂದು ವರ್ಷಕ್ಕಿಂತ ಒಂದು ವರ್ಷಕ್ಕೆ ಪ್ರಯಾಣದಲ್ಲಿ 'ಪ್ರಗತಿ, ಯಶಸ್ವಿ' ಕಾಣುತ್ತಿದ್ದೇವೆ. ಎಲ್ಲರೂ ನಮ್ಮವರೇ ಆದ್ದರಿಂದ ಮನೆಯ ವಾತಾವರಣವನ್ನು ಅನುಭವಿಸಿದೆವು. ಪ್ರಯಾಣಿಕರಿಗೆ ಯಾವ ತೊಂದರೆ ಕಷ್ಟವಾಗದ ಹಾಗೆ, ಸಕಲ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಅವರವರ ಕೆಲಸವನ್ನು ನಿಭಾಯಿಸಿದ್ದರು. ಸಂಘದ ಅಧ್ಯಕ್ಷರಿಗೆ, ಎಲ್ಲಾ ಸದಸ್ಯರಿಗೆ, ಎಲ್ಲಾ ಶ್ರಮಜೀವಿಗಳಿಗೂ ನನ್ನ ಹೃತ್ಪೂರ್ವಕ ವಂದನೆಗಳು. ಒಟ್ಟಿನಲ್ಲಿ ಬಹಳ ಅಚ್ಚುಕಟ್ಟಾದ ಪ್ರವಾಸ. ಇದೇ ರೀತಿ ಪ್ರವಾಸ ನಡೆಯಲೆಂದು ಆಶಿಸುತ್ತೇನೆ.

**– ಛಾಯಾ ಭಗವಾನ್**
**9980162364**

# ಮೇಲುಕೋಟೆ ಪ್ರವಾಸದ ಛಾಯಾಚಿತ್ರ 27.11.2016



ಚಿತ್ರಕೃಪೆ : ಎನ್. ಶಿವಕುಮಾರ್

# ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದ ಸವಿನೆನಪು

ಸುಮಾರು 50 ವರ್ಷಗಳ ಹಿಂದೆ, ಅತ್ತೆಯ ಮನೆಯಿಂದ ಕೈಂಕರ್ಯಗೈಯಲು ಹೋದಾಗ ಆದ ಸವಿನೆನಪು.

ಕ್ಷೇತ್ರಕ್ಕೆ ಬೆಂಗಳೂರು ಕಲಾಸಿಪಾಳ್ಯಂ ಹಾಗೂ ಮೆಜೆಸ್ಟಿಕ್ ಎರಡು ಕಡೆ ಮಾತ್ರ ಬಸ್ಸು ಲಭ್ಯ. ಕ್ಷೇತ್ರಕ್ಕೆ ಸ್ಟಾಪೂ ಇರಲಿಲ್ಲ, ನಾವು ಕೇಳಿ ಇಳಿಯಬೇಕು, ಇಲ್ಲ ಚಂದಾಪುರದಿ ಇಳಿದುಬರಬೇಕು. ಬಸ್ಸು ಯಾವಾಗಲೂ ಭರ್ತಿ ಜನ ಕೂರಲು ಜಾಗಕ್ಕೆ ಸ್ವಲ್ಪ ಹೋರಾಟ ನಡೆಸಬೇಕು. ಸಹನೆಯಿಂದ ನೂಕುನುಗ್ಗಲಿನಲ್ಲಿ ಜಾಗ ಸಿಕ್ಕರೆ ಸಮಾಧಾನ ಇದು ಒಂದು ಹಂತ. ಸಡಗರದಿ ಮನೆಯಿಂದ ಹೊರಡುವಾಗ ಕೈಗಳ ಭರ್ತಿ ಪೂಜೆ ಸಾಮಾಗ್ರಿ. ಪ್ರಸಾದ ವಿತರಣೆಗೆ ಬೇಕಾದ ಬಾಳೆಹಣ್ಣು, ಕಲ್ಲುಸಕ್ಕರೆ ಇತ್ಯಾದಿ, ಸೌತೆಕಾಯಿ, ಬೆಲ್ಲ, ಹೆಸರುಬೇಳೆ ಶಕ್ತ್ಯಾನುಸಾರ ಇಷ್ಟನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡು  ನಡಿಗೆಯಲ್ಲಿ 'ಕಲಾಸಿಪಾಳ್ಯಂ' ಹೋಗಿ ಬಸ್ಸು ಹಿಡಿದು ಕೂತರೆ ಒಂದು ಘಟ್ಟ ಪ್ರಯಾಣದಲ್ಲಿ ಸಿಕ್ಕ ನೆಂಟರು, ಇಷ್ಟರು, ಕೌಂಡಿನ್ಯ ಗೋತ್ರದ ಬಂಧುಗಳು ಎಲ್ಲರನ್ನೂ ಒಡಗೊಂಡು ಕ್ಷೇತ್ರಕ್ಕೆ ತಲುಪುತ್ತಿದ್ದೆವು. ಆಗ ದಾರೀಲಿ ಸುಮಾರು ಜಾಗಗಳಲ್ಲಿ ಖಾಲಿ ಇದ್ದವು. ಎಲ್ಲೋ ದೂರದ ಪ್ರಯಾಣದ ಅನುಭವ. ಆತುರದಿ ಕ್ಷೇತ್ರ ಕಂಡ ತಕ್ಷಣ ಇಳಿಯುವ ಸಂಭ್ರಮ ಸಾಮಾನಿನ ಲೆಕ್ಕ ನೋಡಿ ಇಳಿದರೆ ಸುಮಾರು ದೂರ ಮಣ್ಣಿನ ರಸ್ತೆ. ದೂರಕ್ಕೆ ನಾಗಕಟ್ಟೆದರ್ಶನ, ಕೆಲವು ಹಿರಿಯ ನಾಗರೀಕರು ಕುಳಿತು ಪಟ್ಟಾಂಗ. ಮಹಿಳೆಯರು, ಮಕ್ಕಳು ಸಡಗರದಿ ಓಡಾಟದ ದೃಶ್ಯ, ಕಟ್ಟೆಯ ಪಕ್ಕ ನಮ್ಮ ಕುಲದೈವವಾದ ಶ್ರೀದೇವಿ ಭೂದೇವಿ ಸಮೇತ ಸುಂದರ ಶ್ರೀ ಶ್ರೀನಿವಾಸ ಸನ್ನಿಧಿ. ಸಿದ್ಧಿ ವಿನಾಯಕ, ಗರ್ಭಗುಡಿ ಚಿಕ್ಕದಾದ ದೇವಸ್ಥಾನ. ಅಲ್ಲೇ ಪುರೋಹಿತರಿಗೂ ಮನೆ. ಅಲ್ಲೇ ನಾವು ಸಾಮಾನುಗಳನ್ನು ಇಟ್ಟು ಕೈಕಾಲು ತೊಳೆದು ದೈವದರ್ಶನಗೈದು. ತಂದ ಸಾಮಾನನ್ನು ಕೊಡಲು ಚಿಕ್ಕದಾದ ಕಂಬದ ಛತ್ರ ಇತ್ತು. ಅಲ್ಲಿ ಮಹಿಳೆಯರು ಕೋಸಂಬರಿ ಪಾನಕದ ಸೇವೆಗೆ ಅಣಿ ಮಾಡುತ್ತಿರುವ ದೃಶ್ಯ ಕಾಣುತ್ತಿತ್ತು. ದೇವಸ್ಥಾಬದ ಎದುರಿನಲ್ಲಿ ಒಂದು ಸಣ್ಣ ಕಲ್ಯಾಣಿ. ಅಲ್ಲಿ ನೀರು ಕೈಕಾಲಿಗೆ, ವಸ್ತ್ರ ನೆನಸಲಿಕ್ಕೆ ಉಪಯೋಗಿಸುತ್ತಿದ್ದರು. ನಂತರ ಶ್ರೀ ಶ್ರೀನಿವಾಸ, ಶ್ರೀ ಸುಬ್ರಹ್ಮಣ್ಯ ದೇವರಿಗೆ ಅಭಿಷೇಕ, ಪೂಜೆ, ಹೋಮ ಎಲ್ಲಾ ಸೇವೆ ಆದ ಮೇಲೆ ವಾಲಗದೊಡನೆ ಉತ್ಸವಮೂರ್ತಿ ಶ್ರೀ ಸುಬ್ರಹ್ಮಣ್ಯನ ಪಲ್ಲಕ್ಕಿ ಮೆರವಣಿಗೆ 'ಸುಬ್ಬ–ಸುಬ್ಬ ಗೋವಿಂದ, ಸುಬ್ರಹ್ಮಣ್ಯ ಗೋವಿಂದ' ಎಂಬ ಭಜನೆ ಯೊಂದಿಗೆ ನಾಗರಕಟ್ಟೆ ಮೇಲೆ ಸ್ಥಾಪನೆ. ಭಕ್ತರೆಲ್ಲಾ ಕಟ್ಟೆಯ ಮೇಲೆ ಇರುವ ನಾಗರ ದೈವಗಳಿಗೆ ಷೋಡಶೋಪಚಾರ ಪೂಜೆ ನಂತರ ಬಾಲ ಬ್ರಹ್ಮಚಾರಿಗಳಿಗೆ ವಸ್ತ್ರ ದಕ್ಷಿಣೆ ಬಾಲಸುಬ್ರಹ್ಮಣ್ಯನ ಅವತಾರದಂತೆ ಬೇಕಾದಷ್ಟು ವಟುಗಳು ಭಸ್ಮ ಧರಿಸಿ ಮಡಿಯುಟ್ಟು ಸಿದ್ಧರಾಗಿರುತ್ತಿದ್ದರು. ಆ ದೃಶ್ಯವೇ ಸುಂದರ. ಎಲ್ಲೆಡೆ ಸಾತ್ವಿಕ ಭಕ್ತಿಯ ವಾತಾವರಣ. ಪೂಜೆಯಿಂದ ಆತ್ಮ ತೃಪ್ತಿ, ಸಂತಸ ಕಾಣುತ್ತಿತ್ತು. ಆಗ ಕೋಸಂಬರಿ, ಪಾನಕ, ಗೊಜ್ಜವಲಕ್ಕಿ, ರಸಾಯನದ ವಿತರಣೆ ನಂತರ ಭೋಜನದ ವ್ಯವಸ್ಥೆ. ತುಂಬ ಜನ ಆದ್ದರಿಂದ ತೆಂಗಿನ ತೋಪಿನಲ್ಲಿ ಬಡಿಸುತ್ತಿದ್ದರು. ಬಿಸಿಲ ಬೆಳದಿಂಗಳ ಊಟ. ಎಲ್ಲಾರು ನಿಧಾನವಾಗಿ ಊಟ ಮಾಡಿ, ಮುಂದಿನ ಪಂಕ್ತಿಗೆ ಭಕ್ತರು ಕಾಯುತ್ತಿದ್ದಾರೆ ಎಂಬ ಘೋಷಣೆ ಮಧ್ಯೆ ಪಾಯಸ, ವಡೆ ರುಚಿ ಜಿಹ್ವೆಗೆ. ಹಾಸ್ಯ ರಸದ ಊಟದ ಸವಿ ವನಭೋಜನದ ಸ್ವಾರಸ್ಯ. ಸ್ವಜನಗಳ ಯೋಗಕ್ಷೇಮ. ಎಲ್ಲಾ ಸೇರಿ ಒಂದು ರೀತಿಯ ಸಂತಸ ಇರುತ್ತಿತ್ತು. ಅಲ್ಲಿ, ಕೋತಿ, ಕಾಗೆ, ನಾಯಿ ಇವುಗಳ ಕಾಟ ಇರುತ್ತಿತ್ತು. ಅದನ್ನು ಓಡಿಸಲು ಸ್ವಯಂ ಸೇವಕರು ಪಟಾಕಿ ಹೊಡೆದು ದೊಣ್ಣೆ ಹಿಡಿದು ನಿಂತಿರುತ್ತಿದ್ದರು. ಇದೆಲ್ಲಾ ದೃಶ್ಯವು ವಿನೋದ, ನಗು, ಹಾಸ್ಯ ಎಲ್ಲಾ ಇರುತ್ತಿತ್ತು. ಮನಕ್ಕೆ ಮುದವು ಇತ್ತು ಉಂಡ ನಂತರ ಓಟ ಬಸ್ಸಿಗೆ. ಮತ್ತೆ ಜಾಗಕ್ಕೆ ಹೋರಾಟ. ಸಿಕ್ಕರೆ ತೃಪ್ತಿ. ಕೆಲವರು ಆಕ್ರಮಣಕ್ಕೆ ಸಿದ್ಧರಾಗಿ ಇಳಿಯುವವರ ಬಳಿ ನಿಲ್ಲುತ್ತಿದ್ದರು. ಏನೇ ಆದರೂ ಒಂದು ಸಂತಸವೇ ಮರುವರ್ಷ ಅದೇ ಸಂಭ್ರಮ. 'ಸವಿ ನೆನಪು ಇರಬೇಕು, ಸವಿಯಲ್ಲೇ ಬದುಕು' ಎಂಬಂತೆ.



✍ **ಭ್ರಮರ ಗೋಪಿನಾಥ್**
26677574

# ನಾನು ಮತ್ತು ಕಲ್ಪವೃಕ್ಷ – ಸಂಬಂಧ

ಈ ವರ್ಷದ ಮೇ ತಿಂಗಳ ಒಂದು ಭಾನುವಾರ, ಅನಿವಾರ್ಯ ಕಾರಣಗಳಿಂದ ನಮ್ಮ ಮನೆಯಲ್ಲಿದ್ದ ಕಲ್ಪವೃಕ್ಷವನ್ನು ತೆಗೆಸಬೇಕಾಗಿ ಬಂತು. ನನಗೂ ಹಾಗೂ ಆ ಕಲ್ಪವೃಕ್ಷಕ್ಕೂ ಸುಮಾರು 50 ವರುಷಗಳ ಒಂದು ಅವಿನಾಭಾವ ಸಂಬಂಧವಿತ್ತು ಎಂದರೆ  ತಪ್ಪಾಗಲಾರದು. ನನ್ನ ಜೀವನದ ಸುಖ ದುಃಖಗಳಿಗೆಲ್ಲಾ ಅದು ಮೂಕ ಸಾಕ್ಷಿಯಾಗಿತ್ತು. ಸಾಮಾನ್ಯವಾಗಿ ಕಲ್ಪವೃಕ್ಷ ಯಾರಿಗೂ ತೊಂದರೆ ಮಾಡುವುದಿಲ್ಲ. ನಮ್ಮ ಮನೆ ಮುಖ್ಯ ರಸ್ತೆಯಲ್ಲೆ ಇದ್ದು, ಎದುರುಗಡೆ ಶ್ರೀ ರಾಘವೇಂದ್ರರ ಮಠ ಇದೆ. ಗುರುವಾರದ ದಿನವಂತೂ ಭಕ್ತಾದಿಗಳು ಹೆಚ್ಚಾಗಿರುತ್ತಾರೆ. ನನಗೆ ಜೀವ ಹಿಡಿಯಾಗುತ್ತಿತ್ತು ಅದರ ಗರಿ ಅಥವಾ ತೆಂಗಿನಕಾಯಿ ಬಿದ್ದರೆ ಏನು ಮಾಡುವುದು ಎಂದು. ಆದರೆ ಅದು ನಮಗೆ ಯಾವ ರೀತಿಯ ತೊಂದರೆ ಕೊಡಲಿಲ್ಲ. ನಮ್ಮದು ಮುಂಚೆ ಹೆಂಚಿನ ಮನೆಯಾಗಿತ್ತು. ಆಗ ತೆಂಗಿನಕಾಯಿ ಮೇಲಿಂದ ಬಿದ್ದು ಹೆಂಚು ಒಡೆಯುತ್ತಿದ್ದ ಕಾರಣ ಅದಕ್ಕೆ Mesh ಹಾಕಿಸಿದ್ದೆವು. ಇಲ್ಲಿ ನನ್ನ ಒಂದು ಅನುಭವ ನಿಮ್ಮ ಜೊತೆ ಹಂಚಿಕೊಳ್ಳುತ್ತೇನೆ. ಒಂದು ಸಲ ಭಾರಿ ಮಳೆ ಮಧ್ಯರಾತ್ರಿ ಹೆಂಚು ತೂತಾಗಿ, ಇಡೀ ರಾತ್ರಿ ಆಕಾಶ ಹಾಗೂ ನಕ್ಷತ್ರಗಳನ್ನು ನೋಡುತ್ತಿದ್ದೆವು. ಆ ವೇಳೆಯಲ್ಲಿ ಬೇರೇನೂ ಮಾಡಲು ಸಾಧ್ಯವಿರಲಿಲ್ಲ. ಇಷ್ಟಾದರೂ ಆ ಮರ ನಮಗೆ ಯಾವ ರೀತಿಯ ತೊಂದರೆ ಮಾಡಲಿಲ್ಲ. ಈಗಾಗಲೇ ಮರ ತೆಗೆಸಿ 20 ದಿನಗಳಾದರೂ, ಇನ್ನೂ ಮನಸ್ಸಿಗೆ ಏನೋ ಒಂದು ರೀತಿ ತಳಮಳ ಇದ್ದೇ ಇದೆ. ದಿನಾ ಪೂಜೆ ಮಾಡುವ ವೇಳೆ ಬಂದರೆ, ಮೂಕಳಂತೆ, ಆ ಮರವಿದ್ದೆಡೆ ಹೋಗಿ ನಿಂತು ಬರುತ್ತೇನೆ. ಮರ ಆದರೇನು ಅದಕ್ಕೂ ನನಗೂ ತುಂಬಾ ಆತ್ಮೀಯ ಸಂಬಂಧವಿತ್ತು.

**– ಬಿ.ಪಿ. ಸರಸ್ವತಿ**
**7760634277**

# ಸಂಕ್ರಾಂತಿ ಹಬ್ಬ

ಭಾರತದ ಮುಖ್ಯವಾದ ಹಬ್ಬಗಳಲ್ಲಿ ಸಂಕ್ರಾಂತಿಯೂ ಒಂದು ಮತ್ತು ಅದರ ವಾಸ್ತವ ಕಥೆಯನ್ನು ಮೊದಲು ತಿಳಿಯುವುದು ಅವಶ್ಯಕ. ಈಶ್ವರನ ಪ್ರತ್ಯಧಿದೇವತೆಯಾದ ಸೂರ್ಯ ಅಥವಾ ರವಿಯು ಸ್ಥಿರಗ್ರಹ. ಇತರ ಗೋಚರ ಮತ್ತು ಅಗೋಚರ ಗ್ರಹಗಳೂ ಸೂರ್ಯನ ಸುತ್ತಲೂ, ಭಾರಿ ಅಯಸ್ಕಾಂತ ಪ್ರಭಾವದಿಂದ ಪ್ರದಕ್ಷಿಣೆ ಹಾಕುತ್ತಲಿವೆ. ಹಾಗೆಯೇ, ಭೂಮಿಯೂ ಸೂರ್ಯನ ಸುತ್ತಲೂ ಸುತ್ತುತ್ತಿದ್ದು, ಚಂದ್ರನು ಭೂಮಿಯ ಉಪಗ್ರಹವಾಗಿ ಸುತ್ತುತ್ತಿರುವುದರಿಂದ ನಮಗೆ ರಾತ್ರಿ ಹಗಲು ಆಗುತ್ತಿದೆ. ಆದರೆ ನಮಗೆ ಗೋಚರವಾದಂತೆ ಸೂರ್ಯನು ಸುತ್ತುತ್ತಿಲ್ಲ. ಇದು ನಮಗೆ ಭ್ರಮೆಯಂತೆ ಕಾಣಲು, ಭೂಮಿಯೂ ಮತ್ತು ಚಂದ್ರನೂ ಒಟ್ಟಿಗೆ ಸೂರ್ಯನನ್ನು ಸುತ್ತುವುದೇ ಕಾರಣ. ನಿಜವನ್ನು ನುಡಿಯ ಬೇಕೆಂದರೆ, ಕಾಲಜ್ಞಾನ, ಜೀವರಾಶಿಗಳ ಮತ್ತು ಸಮಸ್ತ ರಾಶಿಗಳ ಕರ್ಮಫಲ ಮತ್ತು ಸಮಸ್ತ ಚರಾಚರ ವಸ್ತುಗಳ ಸೃಷ್ಟಿ ಸ್ಥಿತಿ ಲಯಗಳೂ ನಡೆಯುತ್ತಿವೆ, ಸೂರ್ಯನ ಪ್ರಕಾಶ ಮತ್ತು ಪ್ರಭಾವದಿಂದ. ಸಂಕ್ರಾಂತಿ ಹಬ್ಬವು, ಸೂರ್ಯನನ್ನು ಪೂಜಿಸುವ ವಿಶೇಷವಾದ ಹಬ್ಬ. ಭಾರತೀಯರು ಬೇರೆ ಬೇರೆ ದೇಶಗಳಲ್ಲಿ ನೆಲೆಸಿದ್ದರೂ, ಸಂಕ್ರಾಂತಿ ಹಬ್ಬವನ್ನು ಆಚರಿಸುವುದು ವಾಡಿಕೆ. ಇದರ ಸಂಕೇತವೇನೆಂದರೆ, ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸಿ, ಉತ್ತರಾಯಣ ಪುಣ್ಯಕಾಲಕ್ಕೆ ಕಾಲಿಡುವ ದಿನವಾದುದರಿಂದ ಎಲ್ಲ ಜನರೂ, ಮುಖ್ಯವಾಗಿ ಹಿಂದೂ ಜನಾಂಗದವರು, ಗಂಗಾ, ಯಮುನಾ, ಗೋದಾವರಿ, ಕಾವೇರಿ ಮತ್ತು ಸಮುದ್ರ ತೀರಗಳಲ್ಲಿ ಸ್ನಾನಮಾಡಿ, ಸೂರ್ಯನನ್ನು ನಮಸ್ಕರಿಸುವುದು ಪ್ರಮುಖ ಪದ್ಧತಿ. ಇದು ಜನವರೀ 14ನೇ ತಾರೀಕು ಪ್ರತಿ ವರ್ಷವೂ ಸಂಭವಿಸುವ ಭೌಗೋಳಿಕ ವಿಷಯ. ಆ ದಿನ, ಸೂರ್ಯನು ಭೂಮಿಯ ಮಧ್ಯರೇಖೆಯಿಂದ (Equator) ಅಂದರೆ ಸೊನ್ನೆ ಡಿಗ್ರಿಯಿಂದ ಉತ್ತರಕ್ಕೆ $23\frac{1}{2}^{o}$ ವರೆಗೂ ಚಲಿಸುವುದು, ಉತ್ತರಾಯಣವೆಂದೂ; ಪುನಃ ದಕ್ಷಿಣ ದಿಕ್ಕಿಗೆ $23\frac{1}{2}^{o}$ ವರೆಗೂ ಚಲಿಸುವುದು ದಕ್ಷಿಣಾಯನವೆಂದೂ ಪ್ರತೀತಿ. ಈ ಎರಡು ಆಯನಗಳ ನಡುವೆ 6 ತಿಂಗಳುಗಳ ಅಂತರವಿರುತ್ತದೆ. ಉತ್ತರಾಯಣ ಕಾಲವು ಮುಖ್ಯವಾಗಿರುವುದಕ್ಕೆ, ಕೆಲವು ಪ್ರಬಲ ಕಾರಣಗಳಿವೆ:–

1. ಮುಂದುವರಿದ ಮತ್ತು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳನ್ನು ಒಳಗೊಂಡ ಅಮೇರಿಕಾ, ಯೂರೋಪ್ ಮತ್ತು ಏಷ್ಯಾ ಖಂಡಗಳಲ್ಲಿ ಚಳಿಗಾಲವು ಮುಗಿದು ವಸಂತಕಾಲಕ್ಕೆ ಕಾಲಿಡುವ ಸಮಯ. ಭಾರತವೂ ಈ ಪ್ರದೇಶದಲ್ಲಿ ಇರುವುದರಿಂದ ಪುರಾತನ ಕಾಲದಿಂದಲೂ ಆಚರಿಸಿ ಕೊಂಡು ಬರುತ್ತಿರುವ ಸಂಕ್ರಾಂತಿ ಹಬ್ಬವು ಬಹಳ ವಿಶೇಷವಾದದ್ದು.
2. ವಾತಾವರಣ ಮತ್ತು ಹದಕ್ಕೆ ಅನುಗುಣವಾದ ಬೆಳೆಗಳನ್ನು ಹಿಂಗಾರು ಮಳೆ ಬಿದ್ದ ಮೇಲೆ, ಅಂದರೆ ಮುಖ್ಯವಾಗಿ ಭತ್ತ, ಗೋಧಿ, ಕಬ್ಬು ಮತ್ತು ಕಾಳುಗಳನ್ನು ಬೆಳೆದು, ಅವುಗಳನ್ನು ಮಾರಿ, ರೈತರು ತಮ್ಮ ಜೀವನವನ್ನು ಹಸನಾಗಿ ಮಾಡಿಕೊಳ್ಳುವ ಕಾಲ.
3. ಚಳಿಗಾಲವು ಮುಗಿಯುತ್ತಿದ್ದಂತೆ ನದಿಗಳೂ ತುಂಬಿ ಹರಿದು ಜನರಿಗೆ ಹರ್ಷವನ್ನು ಕೊಡುವ ಮುಖ್ಯವಾದ ಕಾಲ.

ಈ ಮೇಲೆ ತಿಳಿಸಿದ ನೈಜ ಸ್ವರೂಪ ಹೊಂದಿದ, ಪ್ರಕೃತಿ ಪ್ರಭಾವದ ಮಧ್ಯೆ, ಜನರು ಸಂತೋಷಪಡುವಂತ ಹಬ್ಬವೇ ಸಂಕ್ರಾಂತಿ. ಉತ್ತರ ಭಾರತದಲ್ಲಿ ಜನರು ಈ ಹಬ್ಬವನ್ನು ಗಂಗಾನದಿಯಲ್ಲಿ ಸ್ನಾನ ಮಾಡಿ ಸೂರ್ಯದೇವನಿಗೆ ನಮಸ್ಕರಿಸಿ, ಪುಣ್ಯವನ್ನು ಪಡೆಯುತ್ತಾರೆ. ಮಹಾ ರಾಷ್ಟ್ರ, ಗುಜರಾತ್ ರಾಜ್ಯಗಳಲ್ಲಿ ಜನರು ಹಬ್ಬವನ್ನು ಆಚರಿಸಿ, ಹೊಸ ಬಟ್ಟೆ ಮತ್ತು ಹೊಸ ಪಾತ್ರೆಗಳನ್ನು ಕೊಂಡುಕೊಂಡು ತಮ್ಮ ಸ್ನೇಹಿತರೊಡನೆ, ಎಳ್ಳು ಮತ್ತು ಸಕ್ಕರೆಯನ್ನು ಹಂಚಿಕೊಂಡು, ಪ್ರೀತಿ ವಿಶ್ವಾಸವನ್ನು ತೋರ್ಪಡಿಸಿ ಕೊಳ್ಳುತ್ತಾರೆ. ತಮಿಳುನಾಡಿನಲ್ಲಿ ಅತಿಮುಖ್ಯ ಹಬ್ಬವಾಗಿ 'ಸೂರ್ಯ ಪೊಂಗಲ್' ಎಂಬ ಹೆಸರಿನಲ್ಲಿ 3 ದಿನ, 'ಭೋಗಿ', 'ಪೊಂಗಲ್' ಮತ್ತು 'ಮಾಟು ಪೊಂಗಲ್' ಎಂದು ಬಹಳ ವಿಜೃಂಭಣೆ ಯಿಂದ ಆಚರಿಸುತ್ತಾರೆ. ಅಕ್ಕಿ ಮತ್ತು ಬೆಲ್ಲ ಹಾಕಿ ಸಿಹಿ ಪೊಂಗಲ್ ಮಾಡಿ, ಸೂರ್ಯದೇವರಿಗೆ ನೀಡಿ, ಎಲ್ಲರೂ ಹಂಚಿಕೊಂಡು ತಿನ್ನುತ್ತಾರೆ. ಉಳುವ ಎತ್ತುಗಳಿಗೆ ಅಲಂಕಾರ ಮಾಡಿ ಊರಿನಲ್ಲೆಲ್ಲಾ ಪ್ರದರ್ಶನ ಮಾಡಿಸುತ್ತಾರೆ. ಕರ್ನಾಟಕ ದಲ್ಲಿಯೂ ಇದು ಮುಖ್ಯ ಹಬ್ಬ. ಮಕ್ಕಳೂ ಮತ್ತು ದೊಡ್ಡವರೂ ಸೇರಿ ಹೊಸ ಬಟ್ಟೆಯನ್ನು ಧರಿಸಿ, ತಮ್ಮ ಇಷ್ಟ ಬಂಧು ಬಳಗದವರ ಮನೆಗಳಿಗೆ ಹೋಗಿ ಎಳ್ಳು, ಬೆಲ್ಲ, ಕೊಬ್ಬರಿ ಮತ್ತು ಕಬ್ಬು ತುಂಡುಗಳನ್ನು ಕೊಟ್ಟು ಮತ್ತು ಅವರಿಂದ ಸ್ವೀಕರಿಸಿ, ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಸಂಕ್ರಾಂತಿ ಹಬ್ಬವು ನಿಜ ಸ್ವರೂಪದ ಸೂರ್ಯ ದೇವನನ್ನು ಪೂಜಿಸುವ ಆನಂದ ಸಮಯ.

– ಎಂ.ಪಿ. ರಂಗನಾಥನ್

## ಗುರುವಂದನೆ ಅನಿಸಿಕೆ

ಮೊಟ್ ಮೊದಲ್ಕು, ನಮ್ದೆ ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘತ್ಕು ಎಂದೇ ನಮಸ್ಕಾರಂಗು.

ನಮ್ದೇಲ್ಲಾವ್ಳೆ 'ಗುರುವಂದನೆ' ಕಾರ್ಯಕ್ರಮು ಪಣ್ಣೋಣು ಅನ್ನುಟ್ಟು ಯೋಚನೆ ವಂದಿಂದು ಶಾನೇ ಪೆರಿಯ ವಿಷಯು, ಇಪ್ಪಡತಾ ಯೋಚನೆ ವಂದಿದ್ಕು ಎಂದೇ ಒರು ಪೆರಿ ನಮಸ್ಕಾರು. ಅಚ್ಚುಕಟ್ಟೆ ಕ್ರಮಬದ್ಧಮೇ ನಮ್ದೆ ಎಲ್ಲಾ ವಾದ್ಯಾರ್ಗಳ್ಕು ಸನ್ಮಾನು ನಡಕರಪ್ಪೋ ಅವಾಳ್ದೆ ಪರಿಚಯು, ಅವಾಳ್ದೆ ಸೇವೆ ಇಪ್ಪಡೆ ಪ್ರತಿಯೊರ್ ವಿಷಯಮೂ ಚೊಲ್ಲಿಂದ್ ರೀತಿ ಬಲೆ ಅಮೋಘಮೇ ಇರುಂದು. ನಾಂಗೆಲ್ಲಾರೂಮೇ ಇತ್ನಮಾತ್ರು ಇರುಕುತ್ಕು ನಮ್ದೆ ವಾದ್ಯಾರ್ಗಳ್ದೆ ಆಶೀರ್ವಾದು ಖಂಡಿತಮೇ ಅದೆ.

ಅನ್ನಿಕಿ ಊಟು ನನ್ನೆ ಇರುಂದು, ಎಂದೇದು ಒರು ಥ್ಯಾಂಕ್ಸ್.

– ಉಮಾ ಕೆ.ದಾಸ್.
96511520900

## ಸಂಘದ ಶುಭಾಶಯಗಳು

ಸಂಘದ ಪೋಷಕರಾದ ಶ್ರೀ ರಮೇಶ್ ಮತ್ತು ಶ್ರೀಮತಿ ರೇಖಾರವರ ಪುತ್ರ ಚಿ. ರೋಹಿತ್ ರಮೇಶ್‌ರವರ ವಿವಾಹವು ಚಿ. ಆಶಿಕಾ ಜೋಷಿ ಅವರೊಂದಿಗೆ ತಾರೀಖು 21–11–2016ರಂದು ದಾವಣಗೆರೆಯಲ್ಲಿ ನಡೆಯಿತು.

* * *

ಸಂಘದ ಪೋಷಕರಾದ ಶ್ರೀ ಮುತ್ತುಸ್ವಾಮಿ ಮತ್ತು ಶ್ರೀಮತಿ ಮಾನಸರವರ ಪುತ್ರ ಚಿ. ಮಿಥಿಲೇಶ್‌ರವರ ವಿವಾಹವು ಶ್ರೀ ಚೆನ್ನಪ್ಪ ಶಿವಪುರ, ಶ್ರೀಮತಿ ನಿರ್ಮಲಾ ರವರ ಪುತ್ರಿ ಚಿ. ಅನುರಾಧಾ ಶಿವಪುರ ಅವರೊಂದಿಗೆ ತಾ. 4–11–2016 ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಸದಸ್ಯ ಎಸ್.ಆರ್. ವಿಜಯಕುಮಾರ್ ದಂಪತಿಗಳ ಪುತ್ರಿ ಸೌ. ಕಾವ್ಯ ವಿ. ಅವರ ವಿವಾಹ ಚಿ. ವಿಶ್ವಾಸ್‌ಅವರೊಂದಿಗೆ ತಾ. 4.11.2016ರಂದು ನೆರವೇರಿತು.

* * *

ಸದಸ್ಯ ಆರ್.ಸಿ. ನಿರ್ಮಲಾ ಮತ್ತು ಎಸ್. ರಾಮಕೃಷ್ಣರಾವ್ ಅವರ ಪುತ್ರಿ ಸೌ. ಶ್ರುತಿ ವಿವಾಹ ಚಿ. ಆರ್. ಸಾಗರ್‌ಅವರೊಂದಿಗೆ 13.11.2016ರಂದು ನೆರವೇರಿತು

# ಮರೆವು

ಮರೆವು ಎಂಬುದು ಪ್ರತಿಯೊಬ್ಬರ ಜೀವನದಲ್ಲಿ ಬರುವ ಅತ್ಯಂತ ಮುಖ್ಯವಾದ ಘಟ್ಟ. ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಸಾಮಾನ್ಯವಾಗಿ ಮರೆವು 60 ವರ್ಷದ ನಂತರ ಬರುವುದು ವಾಡಿಕೆ. ಇತ್ತೀಚೆಗಂತೂ ಎಲ್ಲಾ ವಯಸ್ಸಿನ ಜನರಲ್ಲಿ ಕಾಣಿಸಿಕೊಳ್ಳುತ್ತಿರುವುದು ಆತಂಕಕಾರಿ. ಒಂದು ಸಾಮಾನ್ಯವಾದ ಮರೆವು ಅಂದರೆ ಕಾಫಿಯನ್ನು ಗ್ಯಾಸ್‌ಸ್ಟವ್ ಮೇಲಿಟ್ಟಿರುತ್ತಾರೆ. ಅಷ್ಟರಲ್ಲಿ ಮೊಬೈಲ್ ಕರೆಯೋ ಅಥವಾ ಕರಗಂಟೆಯ ಶಬ್ದ ಕೇಳಿಸುತ್ತದೆ ಮತ್ತು ಅವರ ಗಮನ ಬೇರಡೆ ಸೆಳೆಯುತ್ತದೆ. ಇಲ್ಲಿ ಕಾಫಿ ಕುದ್ದುಕುದ್ದು ಇಂಗಿ ಹೋಗಿ ಪಾತ್ರೆಯೆಲ್ಲಾ ಕಪ್ಪಾದ ನಂತರ ಆ ಪಾತ್ರೆಯನ್ನು ಬಿಸಾಕಬೇಕಾಗುತ್ತದೆ ಮತ್ತು ಗ್ಯಾಸ್ ಉರಿಯೂ ವ್ಯರ್ಥ. ನನ್ನ ಜೀವನದಲ್ಲಿ ನಡೆದ ಘಟನೆಯನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇವೆ.

- ಒಂದು ಸಲ ಕಾಫಿ ಕುಡಿಯುತ್ತಿದ್ದೆ. ಆಗ ಒಂದು ಮುಖ್ಯ ಸಭೆಗೆ ಅವಶ್ಯ ಹೋಗಬೇಕೆಂದು ಜ್ಞಾಪಕ ಬಂತು ಬಟ್ಟೆ ಹಾಕಿಕೊಳ್ಳಲು ಬೀರುವಿನ ಬಳಿ ಕಾಫಿ ಸಮೇತ ಹೋದೆ. ಬಟ್ಟೆ ತೆಗೆದುಕೊಳ್ಳಲು ಮುಂದಾದಾಗ ಕಾಫಿ ಲೋಟವನ್ನು ಬೀರುವಿನಲ್ಲಿಟ್ಟು ಬಟ್ಟೆ ಹಾಕಿ ಕೊಂಡು ಸಭೆಗೆ ಹೋದೆ. ನಂತರ ಲೋಟವನ್ನು ಮನೆಯೆಲ್ಲಾ ಹುಡುಕಿದೆ. ಮತ್ತೊಂದು ಸಂದರ್ಭದಲ್ಲಿ ಬೀರುವನ್ನು ತೆಗೆದಾಗ ಕಾಫಿ ಬೀರುವಿನಲ್ಲಿ ಚೆಲ್ಲಿ ಬಟ್ಟೆಯೆಲ್ಲ ಆಗಿ ಕಾಫಿ ಲೋಟ ಕೆಳಗೆ ಬಿತ್ತು.
- ಮತ್ತೊಂದು ಸಂದರ್ಭದಲ್ಲಿ ಟಿ.ವಿಯನ್ನು ನೋಡುತ್ತಿದ್ದ ನಾನು Fridgeನಲ್ಲಿ ಏನೋ ತೆಗೆದುಕೊಳ್ಳಲು ಹೋದಾಗ ಅದರಲ್ಲಿ ಮರೆತು TV Remoteಅನ್ನು ಅದರಲ್ಲಿಟ್ಟು ಮರೆತು, ನಂತರ ಸುಮಾರು ಮೂರು ಗಂಟೆ ಹುಡುಕಾಡಿ ನಂತರ ಹೊಸ Remoteನ್ನು ಕೊಂಡುಕೊಂಡೆ. ನಂತರ ಮೂರನೆ ದಿನ Fridge ತೆಗೆದಾಗ Remoteನ್ನು ನೋಡಿದೆ.
- ಅನೇಕ ಸಲ ಏನೋ ತರಲು ಅಡಿಗೆ ಮನೆಗೆ ಹೋಗುತ್ತೇನೆ. ಅಷ್ಟರಲ್ಲಿ ಏನು ತೊಗೋಬೇಕು ಎನ್ನುವುದು ಮರೆತು ಹೋಗುತ್ತದೆ. ಎಷ್ಟು ಜ್ಞಾಪಿಸಿಕೊಂಡರೂ ನೆನಪಾಗುವುದಿಲ್ಲ. ನಂತರ ಎಲ್ಲ ವಸ್ತು ತರಬೇಕು ಎಂದುಕೊಂಡು ಅಲ್ಲೇ ಹೋದರೇ ಜ್ಞಾಪಕ ಬರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಮರೆವು ಎಂಬುದು ಒಂದು ಶಾಪ ಇದರಿಂದ ಹೊರ ಬರಬೇಕಾದರೆ ತುಂಬಾ ಕಷ್ಟ ಪಡಬೇಕಾಗುತ್ತದೆ. ಇದರಿಂದ ಹೊರ ಬಂದರೆ ನಮ್ಮ ಜನ್ಮ ಸಾರ್ಥಕವಾಗುತ್ತದೆ.

**– ಆರ್. ಎಸ್. ರಾಮಕೃಷ್ಣ**
**ನಿವೃತ್ತ ಶಿಕ್ಷಕ, 9980153128**

# ಪ್ರವಾಸ – ಉಪಚಾರ

ಬೆಳಗಿನ ಕೆಂಗಲ್‌ನಲ್ಲಿ, ಹಣ್ಣು ಹಲ್ವ ಇಡ್ಲಿ ಉಪಹಾರ,
ಮಧ್ಯಾಹ್ನ, ಪುಳಿಯೋಗರೆ–ಪೊಂಗಲ್ ರಸಕವಳ ಆಹಾರ
ಸಂಜೆ, ಕಾಫಿ ತಿಂಡಿ ಚಕ್ಕುಲಿ ನಿಪ್ಪಟ್ಟು
ರಾತ್ರಿಗೆ, ಉಪ್ಪಿಟ್ಟು–ಮೊಸರನ್ನ ಪ್ಯಾಕ್ಡ್ ಪ್ಯಾಕೆಟು
MMDBS, ಊಟ ಉಪಚಾರದಿ ಎಂದೂ ಇಲ್ಲ ಬಿಕ್ಕಟ್ಟು

**– ಶಶಿಧರ್ ಹೆಚ್.ಕೆ.**
9845173766

# ಆರ್ಷ ಶಿಕ್ಷಣ – ಗುರುಕುಲ

ಭಾರತ ದೇಶ ಪುರಾತನ, ಸನಾತವಾಗಿದ್ದು. ಪ್ರತಿಯೊಂದು ಪದ್ಧತಿ, ಆಚರಣೆ ಹಿಂದೆ ಆಧ್ಯಾತ್ಮಿಕತೆಯ ತಳಹದಿಯನ್ನು ಗಮನಿಸಬಹುದು. ಅಂತೆಯೇ ನಮ್ಮ ಶಿಕ್ಷಣ ಪದ್ಧತಿಯನ್ನು ಆಧ್ಯಾತ್ಮಿಕ ತಳಹದಿಯ ಮೇಲೆ ಗುರುಕುಲಗಳಲ್ಲಿ ಕಲಿಸಲಾಗುತ್ತಿತ್ತು. ಬ್ರಿಟಿಷರು ಬಂದ ನಂತರ ಕ್ರಮೇಣ ಬದಲಾದಂತೆ ನಮ್ಮ ಶಿಕ್ಷಣ ಕ್ಷೇತ್ರವೂ ಬದಲಾಗಿ ಇಂದು ನಮ್ಮ ತಾತ, ತಂದೆ, ನಾವು ನಮ್ಮ ನಂತರದ ಪೀಳಿಗೆ, ಮೆಕಾಲೆ ಪದ್ಧತಿಯ ಶಿಕ್ಷಣದಿಂದಾಗಿ ನಮ್ಮತನವನ್ನೇ ಬಿಟ್ಟಿರುವ ಶಿಕ್ಷಣ ಪದ್ಧತಿಯಲ್ಲಿ ನಾವಿದ್ದೇವೆ. ಆಧ್ಯಾತ್ಮದ ಸೊಗಡು ಇಲ್ಲದ ಇಂದಿನ ಶಿಕ್ಷಣದಲ್ಲಿ ಸರಸ್ವತೀ ವಂದನೆಯೇ 'ಮಹಾಪರಾಧ' ಎಂಬ ವಾತಾವರಣ ಸ್ಪಷ್ಟ ಆಗ್ತಿದೆ. ಇದೆಲ್ಲದರ ನಡುವೆ ನಮ್ಮ ಪುರಾತನ ಗುರುಕುಲ ಪದ್ಧತಿಯನ್ನು 1995ರಲ್ಲಿ ಪೂಜ್ಯ ಜಗದ್ಗುರು ಶಂಕರಾಚಾರ್ಯರ ತಪೋ ಭೂಮಿಯಾದ ಶೃಂಗೇರಿ ಬಳಿಯ 'ಹರಿಹರಪುರ'ದ ತುಂಗಾ ನದಿಯ ತಟದಲ್ಲಿರುವ 'ಚಿತ್ರಕೂಟ'ದಲ್ಲಿ ಪ್ರಾರಂಭಿಸಿದರು. ಇಲ್ಲಿ 10ನೇ ವಯಸ್ಸಿನ ಅಂದರೆ 4ನೇ ತರಗತಿ ಪಾಸಾಗಿ 5ಕ್ಕೆ ಬರುವ ಗಂಡು ಮಕ್ಕಳಿಗೆ ಶಿಕ್ಷಣ ಆರಂಭವಾಗಿ 12 ವರ್ಷದ ಸತತ ಶಿಕ್ಷಣದಿಂದಾಗಿ ಸಮಾಜಮುಖಿಯಾಗಿ, ಉತ್ತಮ ಪ್ರಜೆಯಾಗಿ ಹೊರಬರುವ ಪ್ರಜೆಗಳ ನಿರ್ಮಾಣವಾಗುತ್ತಿದೆ. ಈ ಶಿಕ್ಷಣಕ್ಕೆ ಯಾರಾದರೂ ಸೇರಬಹುದು. ನಿರ್ದಿಷ್ಟ ಜಾತಿ ಎಂಬ ನಿರ್ಬಂಧವಿಲ್ಲ. ಶುಲ್ಕ–ನಿಶುಲ್ಕ; ನಮ್ಮ ಸಂಸ್ಕೃತಿಯಲ್ಲಿ ಆಹಾರ, ಶಿಕ್ಷಣ, ಔಷಧಿ ಮಾರಾಟದ ವಸ್ತುವಲ್ಲ.

ಪ್ರತಿ ಏಪ್ರಿಲ್‌ನಲ್ಲಿ ಶಾಲೆ ರಜೆ ಸಮಯದಲ್ಲಿ 8,9,10ನೇ ತರಗತಿ ಪರೀಕ್ಷೆ ಬರೆದವರಿಗೆ ವೇದ ಶಿಬಿರ ಸಹ ಏರ್ಪಡಿಸಲಾಗುತ್ತೆ. ಹೆಣ್ಣು ಮಕ್ಕಳಿಗೂ ಇಂತಹದೇ ಶಿಕ್ಷಣದ ವ್ಯವಸ್ಥೆ ಪುತ್ತೂರು ಬಳಿಯ ಮೂರ್ಕಜೆ ಊರಲ್ಲಿ 'ಮೈತ್ರೇಯಿ ಗುರುಕುಲ' ಅಸ್ತಿತ್ವದಲ್ಲಿದೆ. ಇಂತಹ ಶಿಕ್ಷಣ ಸಂಸ್ಥೆಗಳಿಗೆ ನಾವು ಸಹ ತನು–ಮನ–ಧನ ಸಹಾಯ ಮಾಡಬಹುದು.

**– ಕಾಚರಕನಹಳ್ಳಿ ಗೋಪಾಲಯ್ಯ/ಸೇತುರಾಂ**
**9740444555**

# ಶಿಕ್ಷಕರ ಸನ್ಮಾನ ಸಮಾರಂಭ

ಅಂದಿನ ಸಂಘದ ಸಮಾರಂಭ
ಆನಂದದಿ ಸಭಾ ಭವನ ತುಂಬಿತ್ತು
ಇಲ್ಲಿ, ಮಲ್ಲಿಕಾರ್ಜುನ ಭ್ರಮರ ಮಂಟಪದಿ
ಈ ಸಮಾರಂಭಕ್ಕೆ ಅನೇಕ ಗಣ್ಯರು ಬಂದಿದ್ರು.
ಉರಿವ ಸೂರ್ಯನ ಬಿಸಿಲಿತ್ತು
ಊಟ, ಹಿತವಾಗಿ – ರುಚಿಯಾಗಿತ್ತು
ಋಣ ಮುಕ್ತರಾದರು ಶಿಕ್ಷಕರು –
ಎಂಥಾ ದಿನ! ಮರೆಯಲಾಗದೆಂದರು
ಏನು? ಎಲ್ಲಿ? ಎಂದು ಹುಡುಕಾಡಲಿಲ್ಲ
ಐದೈದು, ಶಿಕ್ಷಕರ ಗುಂಪು ಮಾಡಲಾಗಿತ್ತು
ಒಂದೆಡೆ ಶಿಕ್ಷಕರನ್ನು ಗೌರವದಿ ಕೂರಿಸಲಾಗಿತ್ತು
ಔದಾರ್ಯವು ಎಲ್ಲೆಡೆ ಕಾಣುತ್ತಿತ್ತು
ಅಂದಿನ ಕಾರ್ಯಕ್ರಮ ತೃಪ್ತಿ ತಂದಿತ್ತು
ಅಃ ಸುಂದರ ಸಮಾರಂಭ ಮುಗಿದೇ ಹೋಯಿತು.


**– ಸರಸ್ವತಿ ರಾಮಚಂದ್ರ**
9972752142

## ನೆನಪಿನಂಗಳ ಚಿತ್ರ 27-28



ಯಲಹಂಕದ ಸುಬ್ರಹ್ಮಣ್ಯ ಅಯ್ಯರ್ ಹಾಗೂ ಮುಗುಳೂರು ಕುಟುಂಬ (1934)

ಕೃಪೆ : ಡಾ. ಗಾಯತ್ರಿದೇವಿ ಸಾಯಿನಾಥ್




ಅಟ್ಟೂರು ವೆಂಕಟಾಚಲಪತಿ ದಂಪತಿಗಳ ಪುತ್ರಿ ಸೌ. ನಿರ್ಮಲಾ ಸತ್ಯಮೂರ್ತಿಯವರ ವಿವಾಹ ಸಂದರ್ಭ

ಕೃಪೆ : ಕೆ.ಜಿ. ವೆಂಕಟೇಶ್

**ಸಾಧಕರಿವರು**

# ಡಾ|| ಎಸ್.ಎನ್. ಸುಬ್ಬರಾವ್




ವಿಶ್ವ ಶಾಂತಿ ಸಹೃದಯ ಭ್ರಾತೃತ್ವವೇ ಗುರಿಯಾಗಿಸಿಕೊಂಡಿರುವ ಹಾಗೂ ಚಂಬಲ್ ಕಣಿವೆಯ ಭಯಾನಕ ಡಕಾಯಿತರನ್ನು ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸಿರುವವರಲ್ಲಿ ಗಾಂಧಿವಾದಿ (ಪೊಲೀಸ ರಿಂದಲೂ ಅಸಾಧ್ಯವಾದ ಕೆಲಸವನ್ನು ನಿರ್ವಹಿಸಿರುವ) ಸುಬ್ಬರಾಯರು ನಮ್ಮವರೆಂದು ಹೆಮ್ಮೆ ಪಡುವ ಭಾಗ್ಯವಂತರು ನಾವು. ಡಕಾಯಿತರನ್ನು ಮುಖ್ಯವಾಹಿನಿಗೆ ತರುವುದಲ್ಲದೆ ಅವರ ಮುಂದಿನ ಜೀವನ ನಿರ್ವಹಣೆಗೆ ದಾರಿ ತೋರಿಸಿದ್ದಾರೆ. ಡಾ. ಸುಬ್ಬರಾಯರಿಗೆ ರಾಷ್ಟ್ರೀಯ ಯುವ ಚೇತನ ಪುರಸ್ಕಾರ ಕಾಶಿ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ, ರಾಜೀವ ಗಾಂಧಿ ರಾಷ್ಟ್ರೀಯ ಸದ್ಭಾವನ ಪುರಸ್ಕಾರ, ಜಮನ್‌ಲಾಲ್ ಬಜಾಜ್



ಪುರಸ್ಕಾರ, ಮಹಾತ್ಮಾ ಗಾಂಧಿ ಪುರಸ್ಕಾರ, ಇವುಗಳು ಸಂದಿವೆ. 'ಅನುವೃತ್' ಪುರಸ್ಕಾರವನ್ನು ಭಾರತರತ್ನ ಮಾಜಿ ರಾಷ್ಟ್ರಪತಿ ಎ.ಜೆ.ಪಿ ಅಬ್ದುಲ್ ಕಲಾಂರವರಿಂದ ಸ್ವೀಕರಿಸಿರುತ್ತಾರೆ.

ಡಾ|| ಎಸ್.ಎನ್. ಸುಬ್ಬರಾಯರು 7–2–1929ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆ ಸೇಲಂ ನಂಜುಂಡಯ್ಯ ಮತ್ತು ತಾಯಿ ಶಾರದಮ್ಮನವರು. ಅಡ್ವೊಕೇಟ್‌ರಾಗಿದ್ದ ತಂದೆಯವರಿಂದ ಸತ್ಯ, ಶಿಸ್ತಿನ ಸರಳ ಜೀವನ ಮತ್ತು ತಾಯಿಯವರಿಂದ ದೈವಭಕ್ತಿ, ಗಾಯನ ಇವುಗಳನ್ನು ರೂಢಿಸಿಕೊಂಡರು. ಸುಬ್ಬರಾವ್ ಮನೆಯಲ್ಲಿ, ಬಂಧುವರ್ಗದವರಿಗೆ ಆತ್ಮೀಯರಿಗೆ 'ಪಾಪು' ಮತ್ತು ಸಹಸ್ರಾರು ಸ್ನೇಹಿತರು. ಅಭಿಮಾನಿಗಳಿಗೆ 'ಭಾಯ್ ಜೀ' ಆಗಿದ್ದಾರೆ. ಬೆಂಗಳೂರು ಮಲ್ಲೇಶ್ವರದಲ್ಲಿ ಮನೆಯ ಸನಿಹ ಇದ್ದ ರಾಮಕೃಷ್ಣ ವೇದಾಂತ ಕೇಂದ್ರವು ಇವರ ಮೇಲೆ ಪ್ರಭಾವ ಬೀರಿತು. 'ಕಿಟ್ಟಿ ಮಾಸ್ಟರ್' ಎಂದೇ ಆತ್ಮೀಯರಾಗಿರುವ ಪ್ರೊ. ಎನ್. ಕೃಷ್ಣಸ್ವಾಮಿಯವರ ಕಿರಿಯ ಸಹೋದರರಾಗಿರುವ ಶ್ರೀಯುತರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಹೋದರರೊಡಗೂಡಿ ದೇಶಭಕ್ತಿ ಗೀತೆಗಳನ್ನು ಹಾಡುತ್ತಿದ್ದು, 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲೂ ಭಾಗವಹಿಸಿದ್ದರು. ಅವರ ಮನೆಯಲ್ಲಿ ಚರಕವು ತಿರುಗತೊಡಗಿತು. ಖಾದಿಧಾರಿಯಾಗಿ ಗೋಡೆ ಬರಹ ಬರೆಯುತ್ತಿದ್ದ ಪಾಪುವನ್ನು ಜೈಲಿನಲ್ಲಿಟ್ಟರೂ ಈ ಹದಿಮೂರು ವರ್ಷದ ಬಾಲಕನನ್ನು ಆ ದಿನವೇ ಬಿಡುಗಡೆ ಮಾಡಿದರು. ಈ ದಿನಗಳಲ್ಲಿಯೇ ಮಹಾತ್ಮ ಗಾಂಧೀಜಿಯವರ ಪ್ರಭಾವವು ಇವರ ಮೇಲೆ ಆಯಿತು. ಶಾಲಾ–ಕಾಲೇಜು ವರ್ಷಗಳಲ್ಲಿ ಸುಬ್ಬರಾವ್‌ರವರ ದೇಶಸೇವೆ, ಇತರ ಚಟುವಟಿಕೆಗಳು, ಯಾವ ಕೆಲಸವೇ ಆಗಲಿ ಯಶಸ್ವಿಯಾಗಿ ಪೂರ್ಣಗೊಳಿಸುವ ಛಲ ಇವರಲ್ಲಿತ್ತು. ತಂದೆಯವರ ಇಚ್ಛೆಯಂತೆ ಎಲ್.ಎಲ್.ಬಿ. ಪದವಿ ಗಳಿಸಿದರು. ಆಗ ರಾಷ್ಟ್ರೀಯ ಸೇವಾದಳ ಸೇರಿ ಒಳ್ಳೆಯ ಹೆಸರು ಪಡೆದರು. ವಕೀಲಿ ವೃತ್ತಿ ಮಾಡದೆ ಡಾ.ನಾ.ಸು. ಹರ್ಡೀಕರ್ ಅವರ ಆದೇಶದಂತೆ ದೆಹಲಿಗೆ ತೆರಳಿದರು. ಅವರ ಜೀವನದ ದಿಕ್ಕೇ ಬದಲಾಯಿತು. ಮಹಾತ್ಮಗಾಂಧಿ ಶತಮಾನೋತ್ಸವ ಸಂದರ್ಭದಲ್ಲಿ 'ಗಾಂಧಿದರ್ಶನ' ರೈಲಿಗೆ ಸುಬ್ಬರಾವ್‌ರವರನ್ನು ನಿರ್ದೇಶಕರಾಗಿ ನೇಮಿಸಲಾಯಿತು. ಎರಡು ರೈಲುಗಳನ್ನು ಸಜ್ಜುಗೊಳಿಸಿ ಗಾಂಧೀಜಿ ಜೀವನ ಮತ್ತು ವಿಚಾರ ಧಾರೆಗಳನ್ನು ದೇಶಾದ್ಯಂತ ಸಾರುವ ಕಾರ್ಯನಡೆಯಿತು. ಇದು ಒಳ್ಳೆಯ ಯಶಸ್ಸನ್ನು ಗಳಿಸಲು ಶ್ರೀ ಸುಬ್ಬರಾಯರ ಮತ್ತು ಅವರ ತಂಡ ಕಾರಣವಾಯಿತು. 1970ರಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಶ್ರೀ ಆರ್.ಆರ್. ದಿವಾಕರ್ ಅವರ ಆಹ್ವಾನದಿಂದಾಗಿ ಸುಬ್ಬರಾವ್‌ರವರು ಅದರ ಅಜೀವ ಸದಸ್ಯರಾದರು. 1970ರಲ್ಲೇ ಮಧ್ಯಪ್ರದೇಶದ ಮೋರೆನಾ ಜಿಲ್ಲೆಯ ಚೌರಾದಲ್ಲಿನ ಚಂಬಲ್ ಕಣಿವೆಯಲ್ಲಿ 'ಮಹಾತ್ಮಗಾಂಧಿ ಸೇವಾ ಆಶ್ರಮ'ವನ್ನು ಸ್ಥಾಪಿಸಿದರು. ಆಚಾರ್ಯ ವಿನೋಬಾ ಭಾವೆ ಮತ್ತು ಜಯ ಪ್ರಕಾಶ್ ನಾರಾಯಣರು ಕೈಗೊಂಡ ಚಂಬಲ್ ಕಣಿವೆಯ ಬಾಗಿಗಳನ್ನು (ಡಕಾಯಿತರು) ಮುಖ್ಯವಾಹಿನಿಗೆ ತರುವ ಕಾರ್ಯವನ್ನು ಮುಂದುವರಿಸಿ ಅದರಲ್ಲಿ ಮುಖ್ಯಪಾತ್ರವನ್ನು ನಿಭಾಯಿಸಿದರು. 'ಪ್ರೇಮಕ್ಕೆ ಜಯ, ಕೋವಿಗೆ ಸೋಲು' ಉಂಟಾದ ವೀರಗಾಥೆಯದು. 'ಭಾರತ ಸಂತಾನರು ನಾವು, ನಾವೆಲ್ಲರೂ ಒಂದೇ' ಎಂದು ಸಾರುವ, ಇಂದು ಗೊತ್ತು ಗುರಿಯಿಲ್ಲದ ಮುಗ್ಗರಿಸುತ್ತಿರುವ ಯುವಜನತೆಗೆ ಜಾಗೃತಿ ನೀಡುವ ದ್ವಿಮುಖ ಕಾರ್ಯವನ್ನು ಸುಬ್ಬರಾವ್‌ರವರು ತಮ್ಮ ರಾಷ್ಟ್ರೀಯ ಯೋಜನೆಯಡಿ ಕೈಗೊಂಡಿದ್ದಾರೆ. ಅಷ್ಟೇ ಅಲ್ಲ, ವಿಶ್ವದ ಎಲ್ಲೆಡೆ ಮಾನವತ್ವ ಸಾರುವ ಶಿಬಿರಗಳನ್ನು ನಡೆಸುತ್ತಿದ್ದಾರೆ. ಮಾಜಿ ಪ್ರಧಾನಿ ಜವಾಹರಲಾಲ್ ನೆಹರು, ನೊಬೆಲ್ ಪ್ರಶಸ್ತಿ ವಿಜೇತೆ ಮದರ್ ತೆರೇಸಾ, ಮಾಜಿ ಕಾಂಗ್ರೆಸ್ ಅಧ್ಯಕ್ಷ, ಮೇಧಾವಿ ಕಾಮರಾಜ ನಾಡರ್, ಇತ್ತೀಚಿನ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಹಿರಿಯ ರಾಜಕೀಯ ಮುತ್ಸದ್ಧಿ ಎಸ್.ಎಂ.ಕೃಷ್ಣ, ಜಾಫರ್ ಶರೀಫ್ ಇವರುಗಳೂ ಸಮೀಪವರ್ತಿ. ಶ್ರೀಯುತರು ಜಾತಿ ಬೇಧವಿಲ್ಲದೆ ಎಲ್ಲಾ ಧರ್ಮ ಪಂಥಗಳೊಂದಿಗೆ ಒಡನಾಟ ಹೊಂದಿರುವ ಸ್ನೇಹ ಜೀವಿ. ರಾಜ್ಯ ಸಭಾ ಸದಸ್ಯರಾಗಿದ್ದಾಗಲೂ ಖಾದಿ ಚಡ್ಡಿ ಮತ್ತು ಖಾದಿ ಶರ್ಟನೊಂದಿಗೆ ಸರಳ ಉಡುಪು ಧರಿಸಿ ಭಾಗವಹಿಸುತ್ತಿದ್ದರು.



87 ವರ್ಷದ ಉತ್ಸಾಹ ಕುಗ್ಗದ ಸುಬ್ಬರಾವ್ ರವರ ಕಾರ್ಯ ಪ್ರಪಂಚವನ್ನು ವಿವರಿಸುತ್ತಿದ್ದೇವೆಯೇ ಹೊರತು ಅವರ ಆಂತರಿಕ ಜೀವನವನ್ನು ಈ ಲೇಖನ ಪ್ರತಿಬಿಂಬಿಸಲಾರದೆಂಬುದು ನಮಗೆ ಅರಿವಿದೆ. ಆದರೂ ಸಹೃದಯರು ಇದನ್ನು ಓದಿದಾಗ ಅವರಲ್ಲಿ ಮಾನವ ನಿರ್ಮಾಣ ಕಾರ್ಯ ವಿಶ್ವ ಶಾಂತಿಯ ಆದರ್ಶದೆಡೆಗೆ ಆದರ ಮೂಡುವುದೆಂಬ ನಂಬಿಕೆ ನಮಗಿದೆ.



✍ **ಆರ್. ರಮೇಶ್**
9886034048

# ಜೀವನ ವಿಕಾಸ



- ದೇವರು ಒಬ್ಬನೇ, ಅವನನ್ನು ಯಾವ ಹೆಸರಿನಿಂದ ಕರೆದರೂ, ಯಾವ ರೂಪದಿಂದ ಧ್ಯಾನಿಸಿದರೂ, ಯಾವ ರೀತಿಯಲ್ಲಿ ಪೂಜಿಸಿ ದರೂ ಎಲ್ಲಾ ನದಿಗಳ ನೀರು ಸಮುದ್ರವನ್ನೇ ಸೇರುವಂತೆ ಎಲ್ಲ ಆರಾಧನೆಗಳು ಅವನನ್ನೇ ಸೇರುತ್ತವೆ. ಅವನು ದಯಾಮಯನೂ, ಎಲ್ಲರನ್ನೂ ಅತ್ಯಂತ ಪ್ರೇಮಾದರಗಳಿಂದ ನೋಡುವವನೂ, ಸಮಸ್ತ ಕಲ್ಯಾಣ ಗುಣ ಸಂಪನ್ನನೂ ಆಗಿದ್ದಾನೆ. ಸೂರ್ಯ, ಗಾಳಿ, ನೀರು, ಪ್ರಕೃತಿಗಳನ್ನು ಕರುಣಿಸಿ ನಮ್ಮ ಜೀವನವನ್ನು ಆನಂದಮಯವನ್ನಾಗಿ ಮಾಡಿರುವ ಆ ಭಗವಂತನನ್ನು ಪ್ರತಿ ದಿನವೂ ಸ್ವಲ್ಪ ಕಾಲವಾದರೂ ಆರಾಧಿಸುವುದು ಪ್ರತಿಯೊಬ್ಬನ ಕರ್ತವ್ಯ.
- ತಂದೆ-ತಾಯಿಗಳು ದೇವರಿಗೆ ಸಮಾನ. ನಮ್ಮನ್ನು ಕಷ್ಟಪಟ್ಟು ಸಾಕಿ ಸಲಹಿದ ಅವರಿಗೆ ಕೃತಜ್ಞತೆ ಸಲ್ಲಿಸಬೇಕು. ಅವರ ಸೇವೆ ಶುಶ್ರೂಷೆಗಳೇ ನಮ್ಮ ಮುಖ್ಯ ಕರ್ತವ್ಯವಾಗಬೇಕು. ಅವರನ್ನು ಸಂತೋಷ ವಾಗಿಡುವುದೇ ನಮ್ಮ ಗುರಿಯಾಗಬೇಕು.
- ಗುರುವೇ ಎಲ್ಲಾ ವಿದ್ಯೆಗಳಿಗೂ ಆಧಾರ. ಗುರುವನ್ನು ಭಕ್ತಿಯಿಂದ ಸೇವಿಸಿ ಎಲ್ಲಾ ವಿದ್ಯೆಗಳನ್ನು ಕಲಿಯಬೇಕು. ವಿದ್ಯೆ ಕಲಿಸಿದ ಗುರುವನ್ನು ಎಂದಿಗೂ ಮರೆಬಾರದು. ಗುರುವನ್ನು ನಿಂದಿಸಬಾರದು.
- ಯಾವಾಗಲೂ ಸತ್ಯವನ್ನೇ ನುಡಿಯಬೇಕು. ಸತ್ಯವನ್ನು ನುಡಿಯುವವನಿಗೆ ಯಾವ ವಿಧವಾದ ಭಯವೂ ಇರುವುದಿಲ್ಲ. ಸತ್ಯಕ್ಕೆ ಎಂದೂ ಸೋಲಿಲ್ಲ. ಸತ್ಯವನ್ನು ತಪ್ಪಿ ನಡೆದರೆ ಪರಮಾತ್ಮನು ಮೆಚ್ಚುವುದಿಲ್ಲ.
- ಪ್ರಾಮಾಣಿಕತೆ ಮತ್ತು ಪರೋಪಕಾರ ಇವು ಶ್ರೇಷ್ಠವಾದ ಗುಣಗಳು. ಇವುಗಳು ಮನುಷ್ಯನನ್ನು ಅನೇಕ ಕಷ್ಟಗಳಿಂದ ಪಾರು ಮಾಡಬಲ್ಲವು. ಈ ಗುಣಗಳುಳ್ಳವನಿಗೆ ಜೀವನೋಪಾಯವು ಕಷ್ಟವಾಗುವುದೇ ಇಲ್ಲ.
- ನಿಸ್ವಾರ್ಥ ಸೇವೆ ಮತ್ತು ಪ್ರೇಮ ಇವು ದೇವರಿಗೆ ಅತ್ಯಂತ ಪ್ರಿಯವಾದ ಗುಣಗಳು. ಈ ಗುಣಗಳಿದ್ದ ಕಡೆಯಲ್ಲಿ ಶಾಂತಿಯು ತುಂಬಿರುತ್ತದೆ. ಅಲ್ಲಿ ದ್ವೇಷ ಮತ್ತು ಅಸೂಯೆಗಳಿಗೆ ಅವಕಾಶವಿರುವುದಿಲ್ಲ.
- ಕರ್ತವ್ಯವನ್ನು ಯಾವಾಗಲೂ ಮರೆಯಬಾರದು. ಮಾಡಲೇಬೇಕಾದ ಕೆಲಸವನ್ನು ತಪ್ಪದೇ ಮಾಡುವುದರಿಂದ ಜೀವನವು ಸುಗಮವಾಗುತ್ತದೆ. ಅನೇಕ ಮಹಾತ್ಮರ ಜೀವನಗಳಲ್ಲಿ ಕರ್ತವ್ಯ ನಿಷ್ಠೆಯು ಎದ್ದು ಕಾಣುತ್ತದೆ.
- ಆಚಾರದಲ್ಲಿ, ವಿಚಾರದಲ್ಲಿ. ನಡೆನುಡಿಗಳಲ್ಲಿ ಪರಿಶುದ್ಧತೆಯೇ ಬ್ರಹ್ಮಚರ್ಯವೆನಿಸಿಕೊಳ್ಳುವುದು. ಇದನ್ನು ಕಾಯ್ದುಕೊಳ್ಳುವುದು ಬಹಳ ಮುಖ್ಯ. ಇದರಿಂದ, ಮುಖಕಾಂತಿಯೂ, ಆರೋಗ್ಯವು ಮತ್ತು ಜ್ಞಾಪಕಶಕ್ತಿಯು ಹೆಚ್ಚುವುದು. ಅಸಾಧಾರಣವಾದ, ಮನಶ್ಶಕ್ತಿಯನ್ನೂ ಶಾಂತಿಯನ್ನೂ ಕೊಡುವುದು.
- ಸುಖಶಾಂತಿಯುತ ಜೀವನಕ್ಕೆ ಆರೋಗ್ಯವೇ ಆಧಾರ. ಯಾವಾಗಲೂ ಶುದ್ಧವಾಗಿರುವುದರಿಂದಲೂ, ನಿರ್ಮಲವಾದ ಗಾಳಿ, ನೀರು, ಇವುಗಳ ಸೇವನೆಯಿಂದಲೂ, ಆರೋಗ್ಯವು ಉತ್ತಮಗೊಳ್ಳುವುದು. ಕೆಲವು ಯೋಗಾಸನಗಳ ಅಭ್ಯಾಸದಿಂದ ಶರೀರ ಬಲವಾಗುವುದು. ತಿಂಗಳಿಗೊಮ್ಮೆ ಪೂರ್ಣವಾದ ಉಪವಾಸ ಮಾಡಿದರೆ ಒಳ್ಳೆಯದು.
- ಭಗವದ್ಗೀತೆ ಪರಮ ಪವಿತ್ರವಾದ ಗ್ರಂಥ. ಇದನ್ನು ಪ್ರತಿಯೊಬ್ಬರೂ ಓದಬೇಕು. ಪ್ರತಿದಿನ ಒಂದು ಶ್ಲೋಕವನ್ನು ಓದಿ ಅರ್ಥಮಾಡಿಕೊಂಡು ಚೆನ್ನಾಗಿ ವಿಚಾರ ಮಾಡಬೇಕು. ಹೀಗೆ ಎಲ್ಲಾ ಶ್ಲೋಕಗಳನ್ನು ಓದಿದರೆ ಜ್ಞಾನ ಲಭಿಸುತ್ತದೆ.
- ವ್ಯಕ್ತಿತ್ವ ವಿಕಾಸಕ್ಕಾಗಿ ಪ್ರಯತ್ನ ಮಾಡಬೇಕು. ಮಹಾತ್ಮರ ಚರಿತ್ರೆಗಳನ್ನು ಓದುವುದು ಮತ್ತು ದರ್ಶನವನ್ನು ಮಾಡಬೇಕು. ಸತ್ಸಂಗದಲೊಲಿ ಮನಸನ್ನಿಡಬೇಕು. ರಾತ್ರಿ ಮಲಗುವಾಗ ದೇವರ ಧ್ಯಾನ ಮಾಡಿ. ಒಳ್ಳೆಯ ವಿಚಾರಗಳನ್ನು ಕುರಿತು ಯೋಚಿಸುತ್ತ ಮಲಗಬೇಕು.
- ಸತ್ಯ, ಧರ್ಮ ನ್ಯಾಯ, ಪ್ರೇಮ, ನಿಸ್ವಾರ್ಥ ಸೇವೆ. ದಯ ಮುಂತಾದ ಆದರ್ಶ ತತ್ವಗಳಲ್ಲಿ ಕೆಲವನ್ನಾದರೂ ಜೀವನದಲ್ಲಿ ರೂಢಿಸಿಕೊಳ್ಳಲು ಪ್ರಯತ್ನಿಸಬೇಕು.
- ಮನೆಯಲ್ಲಿ ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಇವರೊಡನೆ ಜಗಳವಾಡಬಾರದು. ಹಿರಿಯರನ್ನು ಗೌರವಿಸಬೇಕು. ಎಲ್ಲರೊಡನೆ ಸಹಕರಿಸಿ ಬಾಳಬೇಕು.
- ಪಾಠಶಾಲೆಯಲ್ಲಿ ಒಳ್ಳೆಯ ಹೆಸರು ಪಡೆಯಬೇಕು. ಶಾಲೆಗೆ ತಪ್ಪದೆ ಹೋಗಿ, ಗುರುಗಳಿಗೆ ವಿಧೇಯರಾಗಿ ನಡೆದುಕೊಂಡು ಗಮನವಿಟ್ಟು ಪಾಠ ಕಲಿಯಬೇಕು.
- ಶಾಲೆಯಲ್ಲಿ ಆಟಗಳನ್ನು ಆಸಕ್ತಿಯಿಂದ ಆಡಬೇಕು. ಮೋಸ ಮಾಡದೆ, ಜಗಳವಾಡದೆ ಎಲ್ಲರೊಡನೆ ಸಹಕರಿಸಿ ಆಡಬೇಕು. ಬುದ್ಧಿವಂತರೊಡನೆ, ಒಳ್ಳೆಯವರೊಡನೆ ಸ್ನೇಹ ಬೆಳೆಸಬೇಕು.
- ಪ್ರತಿದಿನ ಸ್ನಾನ ಮಾಡಿ ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಶುದ್ಧವಾದ ಬಟ್ಟೆಗಳನ್ನು ಧರಿಸಬೇಕು. ವಿದ್ಯಾಭ್ಯಾಸ ಮಾಡುವ ಮೊದಲು, ದೇವರಿಗೆ ಪ್ರಾರ್ಥನೆ ಮಾಡಿ ಓದಲು ಪ್ರಾರಂಭಿಸಬೇಕು. ಪಾಠದಲ್ಲಿ ಆಸಕ್ತಿಯನ್ನಿಟ್ಟು ಮನಸ್ಸನ್ನು ಚಲಿಸದೆ ಓದಬೇಕು.
- ಎಲ್ಲರಲ್ಲಿಯೂ ಒಳ್ಳೆಯ ಗುಣಗಳನ್ನು ನೋಡಿ ಕಲಿಯಬೇಕು. ಕೆಟ್ಟ ಗುಣಗಳನ್ನು ಕಾಣುವಂತಾದರೆ ಅವುಗಳನ್ನು ಕಲಿಯದಂತೆ ನೋಡಿಕೊಳ್ಳಬೇಕು.
- ಯಾರನ್ನಾರೂ ಮೊದಲನೆಯ ಸಲ ಸಂಧಿಸಿದಾಗ 'ಹರಿಃ ಓಂ' ಎಂದಾಗಲೀ 'ನಮಸ್ಕಾರ' ಎಂದಾಗಲೀ ಹೇಳಬೇಕು. ಯಾವಾಗಲೂ ಒಳ್ಳೆಯ ಮಾತುಗಳನ್ನೇ ಆಡಬೇಕು.
- ಬಂಧುಗಳೊಡನೆ, ಇಷ್ಟ ಮಿತ್ರರೊಡನೆ ಕೂಡಿ ವಾರಕ್ಕೊಂದು ಸಾರಿಯಾದರೂ ಯಾವುದಾದರೂ ದೇವಸ್ಥಾನಕ್ಕೆ ಹೋಗಬೇಕು. ಮನೆಯಲ್ಲಿ ಹಬ್ಬ ಹರಿದಿನಗಳನ್ನು ಆಚರಿಸಬೇಕು. ಪ್ರತಿದಿನ ಸ್ವಲ್ಪ ಕಾಲವಾದರೂ ದೇವರನ್ನು ಕುರಿತು ಧ್ಯಾನ ಮಾಡಬೇಕು.
- ಸರಕಾರದ ಕಾನೂನು ನಿಯಮಗಳನ್ನು ಪಾಲಿಸಬೇಕು. ದೇಶ ಪ್ರೇಮವನ್ನು ಬೆಳೆಸಿಕೊಳ್ಳಬೇಕು. ನಾಡು ನುಡಿಗಳ ಬಗ್ಗೆ ಅಭಿಮಾನ ಹೊಂದಿರಬೇಕು. ದೇಶವೇ ಹೆಮ್ಮೆ ಪಡುವಂತಹ ಪ್ರಜೆಯಾಗಿ ಆದರ್ಶಜೀವಿಯಾಗಬೇಕು.

ಎಸ್. ಶ್ರೀನಿವಾಸಯ್ಯ
ನಿವೃತ್ತ ಪ್ರಾಂಶುಪಾಲರು, ಕಿತ್ತಗಾನಹಳ್ಳಿ
7899318098



# ನಾ ಕಂಡಂತೆ ಕಾಶಿ, ಗಯಾ, ಅಲಹಾಬಾದ್ ಕ್ಷೇತ್ರಗಳು

ಪ್ರವಾಸ ಎನ್ನುವುದು ನಮ್ಮ ದಿನನಿತ್ಯದ ಚಟುವಟಿಕೆಗಳಿಗೆ ಬಿಡುವು ಕೊಟ್ಟು ಮೈಮನಗಳನ್ನು ಉಲ್ಲಸಿತಗೊಳಿಸಿ ಮುಂದಿನ ದಿನಗಳನ್ನು ಉತ್ಸಾಹ ಮಾಡುವಂತಹುದು. ಪ್ರವಾಸಗಳಲ್ಲಿ ಶೈಕ್ಷಣಿಕ, ಐತಿಹಾಸಿಕ, ಧಾರ್ಮಿಕ ಪ್ರವಾಸಗಳಿವೆ. ಬಾಲ್ಯದ ದಿನಗಳಲ್ಲಿ ಶಾಲೆಗಳಿಂದ ಏರ್ಪಡಿಸುವ ಶೈಕ್ಷಣಿಕ ಪ್ರವಾಸಗಳಿಂದ ಪಾಠಗಳಿಗೆ ಪೂರಕವಾದವುಗಳನ್ನು ಸಹಪಾಠಿಗಳೊಂದಿಗೆ ಮನರಂಜನೆಯೊಂದಿಗೆ ಕಲಿಯುತ್ತೇವೆ. ಇನ್ನು ಐತಿಹಾಸಿಕ ಪ್ರವಾಸಗಳು ದೇಶ, ವಿದೇಶಗಳ ಇತಿಹಾಸ; ವಾಸ್ತು, ಕಲೆ ಮುಂತಾದವುಗಳ ಬಗ್ಗೆ ಆಸಕ್ತಿ ಹುಟ್ಟಿಸುತ್ತದೆ. ಧಾರ್ಮಿಕ ಪ್ರವಾಸ ಪುರಾಣ, ಶಾಸ್ತ್ರ, ಸಂಪ್ರದಾಯ, ಧರ್ಮ, ದೈವದ ವಿಚಾರ, ಹರಕೆಯ ಪೂರೈಕೆಯಂತಹವುಗಳನ್ನು ಒಳಗೊಂಡಿರುತ್ತದೆ. ಇತ್ತೀಚಿನ ದಿನಗಳಲ್ಲಿ ಪ್ರವಾಸವು ಉದ್ಯಮವಾಗಿ ವರಮಾನ ತರುವಂತಾಗಿದೆ.

ನಾವು ಇತ್ತೀಚೆಗೆ ಕೈಗೊಂಡ ಕಾಶಿ, ಗಯಾ, ಅಲಹಾಬಾದ್ (ಪ್ರಯಾಗ) ಪ್ರವಾಸದಲ್ಲಿ ತಿಳಿದುಕೊಂಡ ಕೆಲವು ವಿಚಾರವನ್ನು ಇಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ. ಭಾರತ ದೇಶದಲ್ಲಿನ ದ್ವಾದಶ ಜ್ಯೋತಿರ್ಲಿಂಗಗಳಲ್ಲೊಂದಾದ ಕಾಶಿ ವಿಶ್ವನಾಥನ ದೇವಾಲಯವು ಬಹಳ ಪುರಾತನವಾದುದು. ವಾರಣ ಮತ್ತು ಅಸಿ ಎಂಬ ನದಿಗಳಿಂದ ಆವೃತವಾಗಿರುವುದರಿಂದ ಕಾಶಿಗೆ ವಾರಣಾಸಿ ಎಂಬ ಹೆಸರೂ ಇದೆ. ಹಿಂದೂ ಧರ್ಮದ ಪ್ರತಿಯೊಬ್ಬರೂ ಜೀವನದಲ್ಲಿ ಒಮ್ಮೆಯಾದರೂ ಕಾಶಿದರ್ಶನ ಮಾಡುವುದು ಪುಣ್ಯ ಕಾರ್ಯ ಎಂಬ ಪ್ರತೀತಿಯಿದೆ. ಕಾಲ್ನಡಿಗೆ ಕಾಲದಿಂದಲೂ ಕಾಶಿಗೆ ಪ್ರವಾಸ ಮಾಡುವುದು ರೂಢಿಯಲ್ಲಿದೆ. ಪ್ರಯಾಸದ ಪ್ರವಾಸವು ಈಗ ಹೆಚ್ಚಿನ ಸೌಕರ್ಯಗಳೊಂದಿಗೆ ಸುಲಭವಾಗಿದೆ. ಪವಿತ್ರ ಗಂಗಾ ನದಿಯ ತಟದಲ್ಲಿರುವ ಕಾಶಿಯಲ್ಲಿ ಹಲವಾರು ಘಟ್ಟಗಳಿವೆ. ಮಣಿಕರ್ಣಿಕಾ, ಹರಿಶ್ಚಂದ್ರ, ದಶಾಶ್ವಮೇಧ, ಹನುಮಾನ್ ಇನ್ನೂ ಮುಂತಾದವುಗಳು. ಹಿಂದಿನ ಕಾಲದಲ್ಲಿ ತಮ್ಮ ಜೀವನದ ಕಡೆಯ ದಿನಗಳನ್ನು ಕಾಶಿಯಲ್ಲಿ ಕಳೆಯ ಬಯಸುತ್ತಿದ್ದರು. ಏಕೆಂದರೆ ಸಾಯುವ ಸಮಯದಲ್ಲಿ ವಿಶ್ವೇಶ್ವರನೇ ಅವರುಗಳ ಕಿವಿಯಲ್ಲಿ 'ಶ್ರೀರಾಮ ನಾಮ'ವನ್ನು ಹೇಳಿ ಮುಕ್ತಿಗೆ ದಾರಿ ಮಾಡಿಕೊಡುತ್ತಾನೆಂಬ ನಂಬಿಕೆ ಇತ್ತು.

ಅಂದಿನ ಕಾಲದಲ್ಲಿ ಕಾಶಿಯಾತ್ರೆಗೆ ಹೋದವರು ಹಿಂತಿರುಗಿ ಬರುವುದು ಕಷ್ಟವಾಗಿತ್ತು. ಹವಾಮಾನ, ಆರೋಗ್ಯ ಮುಖ್ಯ ಪಾತ್ರವಾಗಿತ್ತು. ಕಾಶಿಯಾತ್ರೆಯು ಪೂರ್ಣವಾಗುವುದು ಹೇಗೆಂದರೆ, ಮೊದಲು ದಕ್ಷಿಣ ಭಾರತದ ರಾಮೇಶ್ವರಕ್ಕೆ ಹೋಗಿ (ಜ್ಯೋತಿರ್ಲಿಂಗಗಳಲ್ಲೊಂದಾದ ಪಚ್ಚೆಲಿಂಗ) ರಾಮೇಶ್ವರನ ದರ್ಶನ ಮಾಡಿ ಅಲ್ಲಿನ ಸಮುದ್ರದ ಮರಳನ್ನು ಸಂಗ್ರಹಿಸಿ ಕಾಶಿಗೆ ಹೋಗಿ ವಿಶ್ವೇಶ್ವರನ ದರ್ಶನ ಮಾಡಿ, ಮರಳನ್ನು ಗಂಗೆಯಲ್ಲಿ ವಿಸರ್ಜಿಸಿ, ಅಲ್ಲಿಂದ ಗಂಗೆ ನೀರನ್ನು ತಂದು ಮತ್ತೆ ರಾಮೇಶ್ವರದಲ್ಲಿ ಅಭಿಷೇಕ ಮಾಡಬೇಕು. ಕಾಶಿಯಿಂದ ತಂದ ಗಂಗಾಜಲ, ಪ್ರಸಾದವನ್ನು ವಿನಿಯೋಗ ಮಾಡುವ ಪ್ರಯುಕ್ತ ಕಾಶಿ ಸಮಾರಾಧನೆ ಮಾಡುತ್ತಿದ್ದರು.

ಕಾಶಿ ವಿಶ್ವೇಶ್ವರನೊಂದಿಗೆ ಮಾತಾ ಅನ್ನಪೂರ್ಣೇಶ್ವರಿ, ವಿಶಾಲಾಕ್ಷಿಯ ದೇವಾಲಯಗಳೂ ಇವೆ. ಚತುರ್ಮುಖ ಬ್ರಹ್ಮನಿಂದ ಶಾಪಕ್ಕೊಳಗಾದ ಮಹಾದೇವನ ಭಿಕ್ಷಾ ಪಾತ್ರೆಯಲ್ಲಿ ಭಿಕ್ಷೆಯು ನಿಲ್ಲದಂತಾದಾಗ, ಅನ್ನಪೂರ್ಣೇಶ್ವರಿಯು ಹಾಕಿದ ಭಿಕ್ಷೆಯಿಂದಾಗಿ ಭಿಕ್ಷೆ ನಿಲ್ಲುವಂತಾಯಿತು ಎಂಬ ಪುರಾಣ ಕಥೆ ಇದೆ. ಕಾಶಿಯಲ್ಲಿ ಪಿತೃಗಳಿಗೆ ಪಿಂಡ ಪ್ರಧಾನ ಮಾಡುವ ಪದ್ಧತಿ ಇದೆ. ಇನ್ನು ಗಯಾ ಕ್ಷೇತ್ರದಲ್ಲೂ ಪಿಂಡ ಪ್ರಧಾನವೇ



ಪ್ರಧಾನ ಕರ್ಮವಾಗಿದೆ. ಗಯಾಸುರನೆಂಬ ರಾಕ್ಷಸನನ್ನು ಮಹಾವಿಷ್ಣುವು ತನ್ನ ಪಾದದಿಂದ ತುಳಿದು ಭೂಮಿಗೆ ಕಳುಹಿಸಿದ ಕ್ಷೇತ್ರವೇ ಗಯಾ. ಇಂದಿಗೂ ಅಲ್ಲಿ ವಿಷ್ಣುಪಾದ ದರ್ಶನ ಮಾಡಬಹುದು. ಎಂದಿಗೆ ಇಲ್ಲಿ ಒಂದೂ ಪಿಂಡಪ್ರಧಾನ ಕರ್ಮವೂ ನಡೆಯುವುದಿಲ್ಲವೋ ಅಂದು ಗಯಾಸುರ ಮೇಲೆದ್ದು ಬಿಡುವನೆಂಬ ನಂಬಿಕೆ ಇದೆ. ಇಲ್ಲಿ ಇನ್ನೊಂದು ವಿಶೇಷ ಇದೆ. ತ್ರೇತಾಯುಗದಲ್ಲಿ ಶ್ರೀರಾಮನು ಸೀತೆಯೊಂದಿಗೆ ವನವಾಸದಲ್ಲಿದ್ದಾಗ ಪಿತೃಶ್ರಾದ್ಧದ ದಿನ ಮುಂಚಿತವಾಗಿ ದಶರಥನ ಆತ್ಮ ಬಂದು ಆಹಾರವನ್ನು ಯಾಚಿಸಿತು. ಆ ಸಮಯದಲ್ಲಿ ಶ್ರೀರಾಮನು ಅಡುಗೆಗಾಗಿ ಗೆಡ್ಡೆ ಗೆಣಸಿನ ಸಂಗ್ರಹಕ್ಕಾಗಿ ತೆರಳಿದ್ದನು. ಸೀತಾದೇವಿಯು ಮಣ್ಣಿನಿಂದ ಪಿಂಡಗಳನ್ನು ಮಾಡಿ ಅರ್ಪಿಸಿದಳು. ಇದಕ್ಕೆ ಸಾಕ್ಷಿಯಾಗಿ ಪಾಲ್ಗುಣಿನದಿ, ತುಳಸಿಗಿಡ, ಬ್ರಾಹ್ಮಣ, ಹಸು, ವಟವೃಕ್ಷವನ್ನು ಕರೆದಿದ್ದಳು. ಪಿಂಡವನ್ನು ಸ್ವೀಕರಿಸಿ ಆತ್ಮ ತೆರಳಿತಂತೆ. ಶ್ರೀರಾಮನು ಶ್ರಾದ್ಧ ಮಾಡಿ ಮುಗಿಸಿದರೂ, ತಂದೆಯ ಆತ್ಮ ಪಿಂಡ ಸ್ವೀಕರಿಸಲು ಬರಲಿಲ್ಲ. ಆಗ ಸೀತಾದೇವಿಯು ತಾನು ಪಿಂಡ ನೀಡಿದುದಾಗಿ ತಿಳಿಸಿ ಸಾಕ್ಷಿಗಳನ್ನು ತಿಳಿಸಲು ಕೇಳಿದಳು. ಆದರೆ ವಟವೃಕ್ಷವೊಂದನ್ನು ಬಿಟ್ಟು ಉಳಿದವು ತಮಗೆ ತಿಳಿಯದೆಂದು ಸುಳ್ಳು ಹೇಳಿದವು. ಬೇಸರದಿಂದ ಸೀತೆಯು ಫಾಲ್ಗುಣಿ ನದಿಯಲ್ಲಿ ನೀರು ಇಂಗಲೆಂದು, ತುಳಸಿಗಿಡವು ಎಲ್ಲೆಂದರಲ್ಲಿ ಬೆಳೆಯುವುದೆಂದೂ, ಬ್ರಾಹ್ಮಣನಿಗೆ ಎಷ್ಟು ದಕ್ಷಿಣೆ ನೀಡಿದರೂ ತೃಪ್ತಿ ಇರದೆಂದೂ, ಹಸುವು ಮಾತು ಬರದೆ ಮೂಕವಾಗಲೆಂದು ಶಪಿಸಿದಳು. ಆದರೆ ವಟವೃಕ್ಷ ಸತ್ಯ ನುಡಿದಿದ್ದರಿಂದ, ಶ್ರಾದ್ಧ ಮಾಡಿ ಪಿತೃಗಳಿಗೆ ಪಿಂಡಪ್ರಧಾನ ಅದರ ಬಳಿ ಮಾಡುವುದರಿಂದ ಪಿತೃಗಳಿಗೆ ಮುಕ್ತಿ ದೊರೆಯುವುದೆಂದು ಹೇಳಿದಳು. ಆ ಪದ್ಧತಿ ಇಂದಿನವರೆಗೂ ನಡೆದು ಬಂದಿದೆ. ಗಯಾದಲ್ಲಿ ಪಿತೃಶ್ರಾದ್ಧ ಮಾಡಿದ ಮೇಲೆ ಬೇರೆಲ್ಲೂ ಮಾಡುವಷ್ಟಿಲ್ಲ ಎಂದೂ ಹೇಳುತ್ತಾರೆ. ಆದರೆ ಮಾಡುವವರಿಗೂ, ಮಾಡಿಸುವವರಿಗೂ ಶ್ರದ್ಧೆ ಮುಖ್ಯ. ಗಯಾಗೆ ತೆರಳಿದ ದಂಪತಿಗಳು ತಮಗಿಷ್ಟವಾದ ಒಂದು ತರಕಾರಿ, ಒಂದು ಹಣ್ಣು, ಒಂದು ಸಿಹಿ ತಿನಿಸನ್ನು ತಿನ್ನುವುದನ್ನು ವರ್ಜಿಸಬೇಕೆಂಬ ಪ್ರತೀತಿ ಇದೆ. ಇದು ಇಂದ್ರಿಯ ನಿಗ್ರಹ ಬರಬೇಕೆಂಬುದು ಅವಶ್ಯ ಎಂದು ತಿಳಿಯಲು ಹಿರಿಯರು ಈ ರೀತಿ ಹೇಳಿದ್ದಾರೆ. ಜಿಹ್ವೆ ಎಂಬ ಇಂದ್ರಿಯಕ್ಕೆ ಎರಡು ಕೆಲಸಗಳಿವೆ. ಇಂದ್ರಿಯ ಚಾಪಲ್ಯವನ್ನು ಕಡಿಮೆ ಮಾಡಿಕೊಳ್ಳುವುದೆಂಬುದು ಬಹಳ ಕಷ್ಟ. ಅಲ್ಲಿಗೆ ಹೋಗಿ ಬಂದಿದ್ದರಿಂದಲಾದರೂ ಸಾಧನೆಯ ಮಾರ್ಗದಲ್ಲಿ ಪ್ರಾಪಂಚಿಕ

ಭೋಗಗಳನ್ನು ಕಡಿಮೆಮಾಡಿಕೊಳ್ಳುತ್ತಾ ದೈವದತ್ತ ಚಿತ್ತ ಹರಿಸಬೇಕೆಂಬುದರ ಸಂಕೇತ. ಅಲಹಾಬಾದ್‌ನಲ್ಲಿರುವ ಪ್ರಯಾಗವು ಗಂಗಾ, ಯಮುನಾ, ಗುಪ್ತಗಾಮಿನಿಯಾದ ಸರಸ್ವತಿ ನದಿಯ ತ್ರಿವೇಣಿ ಸಂಗಮ ಸ್ಥಾನ. ಇಲ್ಲಿ ಮಿಂದರೆ ಪಾಪನಾಶನ, ಪುಣ್ಯ ಪ್ರಾಪ್ತಿ ಎಂಬ ನಂಬಿಕೆ ಇದೆ. ಈ ಕ್ಷೇತ್ರದಲ್ಲಿ ವೇಣಿದಾನವೆಂಬ ಸಂಪ್ರದಾಯ ಇದೆ. ಪತಿಪತ್ನಿಯರ ಅನ್ಯೋನ್ಯ ದಾಂಪತ್ಯಕ್ಕೆ ಸಾಕ್ಷಿಯಾಗಿ ಪತ್ನಿಯಿಂದ ಪತಿಗೆ ಪಾದಪೂಜೆ ಮತ್ತು ಪತಿಯು ಪತ್ನಿಗೆ ತಲೆಬಾಚಿ ತಲೆ ಕೂದಲನ್ನು ಮೂರು ಭಾಗ ಮಾಡಿ (ತ್ರಿವೇಣಿ) ಜಡೆ ಹೆಣೆದು ಜಡೆ ತುದಿಯನ್ನು ಕತ್ತರಿಸಿ ತ್ರಿವೇಣಿ ಸಂಗಮದಲ್ಲಿ ವಿಸರ್ಜಿಸುವ ರೂಢಿ ಇದೆ. ಅಂದರೆ ಪತಿಪತ್ನಿಯರು ತಮಗಿರುವ ಅಜ್ಞಾನ ವನ್ನು ಕತ್ತರಿಸಿ ಮೋಕ್ಷ ಸಾಧನೆಯಲ್ಲಿ ಒಬ್ಬರಿಗೊಬ್ಬರು ಭಾಗಿಯಾಗುವುದು ಇದರರ್ಥ. ಈ ಕಾರ್ಯ ಅರ್ಥಪ್ರಧಾನವಾಗಿ ನಡೆದುಬಂದಿದೆ.



✍ ಲಲಿತಾ ರಮೇಶ್
9945199637

# ನಮ್ಮಮ್ಮನ ಹಾಗೆ...

ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ,
ನೀರಸಾರ ಅರಸಿ, ಆಳಕ್ಕಿಳಿದು, ಅಡ್ಡಕ್ಕೆ ಹರಿದು,
ಮರೆಯಲ್ಲೇ ಮೈಮರೆತು ನಿರಂತರ ದುಡಿಯುವ ಮೂಲ ಬೇರಿಗೆ,
ಆಕಾಶಕ್ಕೇರಿದ ವೃಕ್ಷದ ತುದಿಗೆ ಕಾಣಿಸುವುದಿಲ್ಲವಾದರೂ,
ಅದರ ಚಡಪಡಿಕೆ, ಹಸಿವು, ನೀರಡಿಕೆಗಳ ಅರಿವಾಗುತ್ತದೆ.
ತಿಂದು ತೇಗಿ, ಹಸಿರಾಗಿ, ಹರವಾಗಿ, ಬಲವಾಗಿ ಬೆಳೆದು,
ಧಾರಾಳ ನೆರಳು, ಫಲಗಳ ನೀಡಿ ನೀಡಿ,
ಹೊಗಳಿಕೆ, ಬಿರುದುಗಳಿಗೆ ಬೀಗಿ, ಬೀಗಿ
ಮತ್ತೆ, ಮತ್ತೆ, ಮೇಲೇರಿ ತಲೆಯೆತ್ತಿ
ಮೆರೆದಾಡುವ ವೃಕ್ಷಕ್ಕೆ
ತನಗೆ ಉಸಿರಾದ, ನೆಲೆಯಾದ ಆಧಾರವಾದ
ಮೂಲಬೇರಿನ ಅಸ್ತಿತ್ವದ ಅರಿವಾಗುವುದಿಲ್ಲ.
ತೊಟ್ಟು ನೀರಿಲ್ಲದ, ಬೆಟ್ಟದ ಮೇಲೂ,
ದಟ್ಟವಾಗಿ ಹರಡಿದ ಮರದ ಸಫಲ
ಸಾಮರ್ಥ್ಯಕ್ಕೆ ಸಮಸ್ತರೂ ಬೆರಗಾಗುತ್ತಾರೆಯೇ
ಹೊರತು ಮೂಲಬೇರಿನ ಇರವನ್ನು ಯಾರೂ ನೆನೆಯರು
ಯಾವುದಕ್ಕೂ ಮೂಲ ಬೇರು ಬೇಸರಿಸುವುದಿಲ್ಲ.
ಅನ್ಯಥಾ ಯೋಚಿಸುವುದಿಲ್ಲ
ಯಾವುದಕ್ಕೂ ಯೋಜಿಸುವುದಿಲ್ಲ
ಯಾವ ಫಲಿತಾಂಶವನ್ನು ನಿರೀಕ್ಷಿಸುವುದಿಲ್ಲ.
ಏನನ್ನೂ ಯಾಚಿಸುವುದೂ ಇಲ್ಲ
ಯಾಕೆಂದರೆ ಮೂಲ ಬೇರಿನ ಬಗೆಯೇ ಹೀಗೆ,
ಅಮ್ಮನ ಹಾಗೆ – ನಮ್ಮಮ್ಮನ ಹಾಗೆ

ಶಾಲ್ಯ
– ಎಸ್.ಆರ್. ಸುಬ್ಬರತ್ನಮ್ಮ, 9448452332

# ಮಂಕುತಿಮ್ಮನ ಕಗ್ಗ



**"ಮಾಯೆಯೊಮ್ಮೆಮ್ಮೆ ತೋರುವಳು ಮಿಗಿಲಕ್ಕರೆಯಾ ಮಾಯಿಪಳು ಗಾಯಗಳ ನೀವಷ್ಟಗಳ ಮೈಯನೀಂ ಮರೆಯೆ ನೂಕುವಳಾಗ ಪಾತಾಳಕೆ ಪ್ರೇಯಿ ಪೂತನಿಯಿವಳು.... ಮಂಕುತಿಮ್ಮ!!**

ಪರಬ್ರಹ್ಮ ವಸ್ತುವು ಲೀಲೆಗಾಗಿ ಮಾಯೆಯನ್ನು ಸೃಷ್ಟಿಸಿತು. ಮಾಯೆಯಿರದ ಜಗತ್ತಿಲ್ಲ. ಮಾಯೆಗೆ ಒಳಗಾಗದ ಮನುಷ್ಯರಿಲ್ಲ... ನಾವೆಲ್ಲರೂ ಒಂದಲ್ಲಾ ಒಂದು ಬಗೆಯಲ್ಲಿ ಆ ಮಾಯೆಗೆ ಆಕರ್ಷಿತರಾದವರೇ! ಸೋತವರೇ! ಈ ಮಾಯೆ ನಮ್ಮ ಜೀವನದಲ್ಲಿ ಒಂದೊಂದು ಸಲ ಅಧಿಕವಾದ ಪ್ರೀತಿ, ಅಕ್ಕರೆ, ಮಮತೆಯನ್ನು ತೋರಿಸುತ್ತಾಳೆ... ನಮಗೆ ಜೀವನ ಎಂದರೆ ಸ್ವರ್ಗವೇ ಎನ್ನುವಂತೆ ಮಾಡುತ್ತಾಳೆ. ಪ್ರಪಂಚದಲ್ಲಿ ನೋವುಗಳೇ ಇಲ್ಲವೇನೋ ಎಂಬಂತೆ ಸುಖದ ಸುಪ್ಪತ್ತಿಗೆಯಲ್ಲಿ ನಮ್ಮನ್ನು ಮೀಯಿಸುತ್ತಾಳೆ, ಶರೀರದಲ್ಲಿ ಏನಾದರೂ ಗಾಯ ಉಂಟಾದಾಗ, ಹಿತವಾಗುವಂತೆ, ವಾಸಿಯಾಗುವಂತೆ ಮುಲಾಮು ಹಚ್ಚುತ್ತಾಳೆ. ನಾವು ಶಾರೀರಿಕವಾಗಿಯಾಗಲೀ, ಮಾನಸಿಕವಾಗಿ ಯಾಗಲೀ ನೊಂದು ಬೇಸರಿಸಿದಾಗ, ತಂಪನ್ನೆರದು ವಾಸಿ ಮಾಡುತ್ತಾಳೆ, ಮತ್ತು ನಮಗೆ ಏನೇನು ಇಷ್ಟ–ಆಸೆಗಳಿವೆಯೋ, ಅವೆಲ್ಲವನ್ನೂ ಸಹ ನೀಡಿ ಸಂತೋಷಿ ಸುವಂತೆ ಮಾಡುತ್ತಾಳೆ. ಇನ್ನು ಈ ಪ್ರಪಂಚದಲ್ಲಿ ಸುಖ ಬಿಟ್ಟು ಬೇರೇನೂ ಇಲ್ಲ ಎನ್ನುವಂತೆ ಹರುಷದ ಹೊನಲಿನಲ್ಲಿ ಹರಿದಾಡಿಸುತ್ತಾಳೆ. ಇಷ್ಟೆಲ್ಲಾ ಸುಖ ಸಂತೋಷದಲ್ಲಿ ಮುಳುಗಿದ್ದಾಗ, ಇದ್ದಕ್ಕಿದ್ದಂತೆಯೇ ನಮ್ಮನ್ನು ಪಾತಾಳಕ್ಕೆ ನೂಕಿ ಬಿಡುತ್ತಾಳೆ. ಕಷ್ಟಗಳನ್ನು ಕೊಡುತ್ತಾಳೆ, ನೋವನ್ನು ನೀಡುತ್ತಾಳೆ. ಎಷ್ಟೆಷ್ಟು ಕಷ್ಟಗಳನ್ನು ಕೊಡಬೇಕೋ ಅಷ್ಟು ಕೊಟ್ಟು ಆನಂದಿಸುತ್ತಾಳೆ. ಪ್ರಿಯ ಪೂತನಿ ಯವಳು ಎಂದು ಮಾಯೆಯನ್ನು ಕರೆದಿದ್ದಾರೆ ಮಾನ್ಯ ಡಿ.ವಿ.ಜಿಯವರು. ಪೂತನಿ ಎಂಬ ರಕ್ಕಸಿ ತನ್ನ ಕುರೂಪವನ್ನು ಮರೆಮಾಚಿ ಸುಂದರ ರೂಪವನ್ನು ಧರಿಸಿ, ಶ್ರೀ ಕೃಷ್ಣನಿಗೆ ವಿಷದ ಸ್ತನ್ಯಪಾನವನ್ನು ಮಾಡಿಸಿದಳು. ಅದರಂತೆಯೇ, ಆ ಮಾಯೆಯ ಆಕರ್ಷಣೆಗೆ ಸಿಲುಕಿದ ನಾವೂ ಅವಳ ಬಲೆಗೆ ಬಲಿಯಾಗಿ ವಿಷವನ್ನು ಸೇವಿಸುತ್ತಿದ್ದೇವೆ, ಆಮಿಷ ಗಳನ್ನು ತೋರಿ ನಮ್ಮನ್ನು ಆಸೆ ಪಡುವಂತೆ ಮಾಡಿ ಕೊನೆಗೆ ವಿಷವನ್ನು ಉಣಿಸುತ್ತಾಳೆ. "ಆದ್ದರಿಂದ ಮಾಯೆಯ ಆಕರ್ಷಣೆಗೆ ಒಳಗಾಗದಿರು" ಎಂದು ಸೂಕ್ಷ್ಮವಾಗಿ ಜೀವಿಗಳನ್ನು ಎಚ್ಚರಿಸುತ್ತಿದ್ದಾರೆ ತಿಮ್ಮಗುರು. ಮೇಲೆ ಪ್ರಿಯವಾಗಿ ಕಾಯುತ್ತಾ/ ಕಾಣುತ್ತಾ ಅಂತರಂಗದಲ್ಲಿ ಪೂತನಿಯಂತಿ ರುವವಳು ಈ ಮಾಯೆ ಎಂದು ತಿಳಿಹೇಳುತ್ತಿದ್ದಾರೆ. ಕಠೋರಪನಿಷತ್ತಿನಲ್ಲಿ ಮೃತ್ಯು ದೇವತೆಯಿಂದ ದಿಟ್ಟ ಬಾಲಕ ನಚಿಕೇತನಿಗೆ ಅಮೃತತ್ವದ ಉಪದೇಶವಾಗಿದೆ. ಅದರಲ್ಲಿ ಕಠೋಪನಿಷತ್ತಿನಲ್ಲಿ ಮೃತ್ಯು ದೇವತೆಯಾದ ಯಮನು ಹೀಗೆ ಹೇಳುತ್ತಾನೆ.

'ಶ್ರೇಯಸ್ಸು ಮತ್ತು ಪ್ರೇಯಸ್ಸು ಎಂಬೆರಡು ಮಾರ್ಗಗಳಿಂದಲೂ ಮಾನವ ಬಂಧಿಸಲ್ಪಡುತ್ತಾನೆ. ಶ್ರೇಯಸ್ಸು ಮೋಕ್ಷಕ್ಕೆ ಕಾರಣವಾದ ಜ್ಞಾನ–ಇದು ಬಹಳ ಕಷ್ಟಕರವಾದದ್ದು. ವಿವೇಕಿಯಾದವನಿಗೆ ಮಾತ್ರ ಈ ಮಾರ್ಗ ಸಾಧ್ಯ. ಇನ್ನೊಂದು ಪ್ರೇಯಸ್ಸು... ಸಂತೋಷಕರವಾದದ್ದು... ಪ್ರಿಯವಾದದ್ದು... ಇದು ಲೌಕಿಕ ಅಭಿವೃದ್ಧಿ ಯನ್ನು ಕೊಡುತ್ತದೆ. ಇದಕ್ಕೆ ಸಂಬಂಧಪಟ್ಟದ್ದು ಶ್ರೇಯಸ್ಸು". ಈ ಪ್ರಪಂಚದಲ್ಲಿ ಮಾಯೆಯಿಂದ ಆಕರ್ಷಿತರಾದ ಜನರು ಎಲ್ಲಾ ಆಮಿಶಗಳಿಗೆ ಒಳಗಾಗಿ ಸುಖವನ್ನು ಬಯಸುತ್ತಾರೆಯೇ ಹೊರತು, ಆ ನಂತರ ಬರುವ ಕಷ್ಟ ಕಾರ್ಪಣ್ಯಗಳನ್ನು ಇಷ್ಟ ಪಡುವುದಿಲ್ಲ. ಆದರೆ ಮಾನವನಿಗೆ ಸುಖವೊಂದೇ ಅನುಭವವಾಗದೇ ಕಷ್ಟವೂ ಅನುಭವಿಸಬೇಕು. ಅದೇ ಜೀವನ, ಯಾರೇ ಇರಲಿ ಭವಿಷ್ಯದಲ್ಲಿ ಸುಖವನ್ನು ಕೊಡುವ ಶ್ರೇಯಸ್ಸಿನ ಮಾರ್ಗವನ್ನು ಮಾರುಹೋದವವರಿಲ್ಲ. ಆ ಕ್ಷಣದಲ್ಲೇ ಕೊಡುವ.. ತೋರುವ ಸುಖದ ಮಾರ್ಗವಾದ ಪ್ರೇಯಸ್ಸಿನಲ್ಲಿ ಆಕರ್ಷಿತರಾಗಿ ಕಷ್ಟಗಳಲ್ಲಿ ಸಿಲುಕುತ್ತಾರೆ..

(ಅಂತೆಯೇ ಕೃಷ್ಣನಿಗೆ ಹೊರಗೆ ಸುಂದರಳಾಗಿಯೂ, ಆಂತರ್ಯದಲ್ಲಿ ರಕ್ಕಸಿಯಾಗಿಯೂ ಇರುವ ಪೂತನಿಯು ತನ್ನ ವಿಷದ ಸ್ತನ್ಯಪಾನವನ್ನು ಉಣ್ಣಿ ಸುತ್ತಾಳೆ. ಮಾಯೆ ಈ ಪೂತನಿಯಂತೆಯೇ ಎಂದು ಜನರನ್ನು ಮಾರ್ಮಿಕವಾಗಿ ಎಚ್ಚರಿಸುತ್ತಿದ್ದಾರೆ ತಿಮ್ಮ ಗುರುವಾದ ಮಾನ್ಯ ಡಿ.ವಿ.ಜಿಯವರು.)

ಸಿ.ಪಿ. ಲಕ್ಷ್ಮೀದೇವಿ
23444798

ಮಾನ್ಯರೆ, ಬೃಹಚ್ಚರಣದ ತ್ರೈಮಾಸಿಕ ಪತ್ರಿಕೆಗೆ 5 ವರ್ಷ ತುಂಬಿದ್ದು ಸಂತೋಷ. ಈ ಸಂದರ್ಭದಲ್ಲಿ ಸುಮಾರು ಅಕ್ಟೋಬರ್ 1982ರಲ್ಲಿ ಬೃಹಚ್ಚರಣ ಸ್ಮರಣ ಸಂಚಿಕೆ–1 ಹೊರತಂದದ್ದು, ಅದರಲ್ಲಿ ಶ್ರೀ ವೈ.ಎಸ್.ಜಿ. ವಿರಚಿತ ಶುಭಾಶಯ ಕುಸುಮತ್ರಯ ಸ್ಮರಿಸಬಹುದು ಆ ಕಂದ ಕೆಳಗೆ ಕೆಂಡಂತಿದೆ :

ಶ್ರೀ ಸೃಷ್ಟಿಕರ್ತನ ಮಳಂ ।
ಭಾಸುರ ವೇದ ಸ್ವರೂಪಿ ಧರ್ಮೋದ್ಧಾರಂ ॥
ಭೂಸುರ ದ್ರಾವಿಡರ ಸಮಾ।
ವೇಶಂ ಧ್ಯೇಯವನೆ ಸಾಧಿಸಲ್ ಪ್ರಾರ್ಥಿಸುವೆಂ ॥ 1 ॥

ಸಂಘಮಿದು "ಮಂಜಪತ್ತೂರ್"।
ರಂಗದ ಸುವಿಮಲ ಜನಾಂಗದೇಳ್ಗೆಗೆ ಮೂಲಂ ॥
ಸಂಘಟನೆಯೊದಗಿ ಜನರೊಳ್ ।
ಮಂಗಳ ಮಯವಾಗಲೆಂದು ಸಾರ್ಥಕ ಮಷ್ಕಂ ॥ 2 ॥

ದ್ರಾವಿಡ ಸಂಘದ ನಾವ್ ಸ।
ದ್ಭಾವನೆಯಿಂ ಬಂಧು ಜನರನೊಂದಾಗಿ ಸುತಂ ॥
ಪಾವನ ತರ ಕಾರ್ಯಂಗಳಂ ।
ಗೈವಂದದಿ ಪರಸುತಿರ್ಕೆ ಚಂಪಕ ಧಾಮಂ ॥ 3 ॥

ತಮ್ಮವ


**ಟಿ.ಎಲ್. ರಾಮಚಂದ್ರನ್, ಥಾನೆ, ಮುಂಬೈ**
**9869833440**


## ಕೃಷ್ಣ ಒಂದೇ ಜಗದ್ಗುರುಂ

ದೇವಕಿ ವಸುದೇವರ ಮಗುವಾಗಿ ಜನಿಸಿದೆ
ಸೆರೆಮನೆಯಲ್ಲಿ ದಿವ್ಯ ಹೊಂಬೆಳಕೆ ಹರಿಸಿದೆ
ನಂದ ಯಶೋದೆಯರ ಸುತನಾಗಿ ಬೆಳೆದೆ
ಗೋಪಾಲಕನಾಗಿ ನಂದ ಗೋಪರನೆಲ್ಲ ಸೆಳೆದೆ ॥1॥

ಶೈಶವದಲ್ಲೇ ಕೊಲ್ಲ ಬಂದ ಪೂತನಿಯ ಕೊಂದೆ
ನಾನಾರಕ್ಕಸರನೆಲ್ಲ ನೀ ಯಮ ಪುರಿಗೆ ಅಟ್ಟಿದೆ
ಗೋಪಿಯರೊಡನೆ ರಾಸಲೀಲೆಯನೆ ರಚಿಸಿದೆ
ಅವರೊಳು ಆಧ್ಯಾತ್ಮವನು ತಿಳಿಸಿ ಹೇಳಿದೆ ॥2॥

ಬಾಲ್ಯದೊಳು ದುಷ್ಟ ಕಂಸನನು ವಧಿಸಿದೆ
ತಾಯಿ ತಂದೆಯರ ಸೆರೆಯಿಂದ ಬಿಡಿಸಿದೆ
ಪಂಚಪಾಂಡವರ ಪ್ರಿಯನೆ ನೀನಾದೆ
ದ್ರೌಪದಿಗೆ ವಸ್ತ್ರವನಿತ್ತು ಮಾನ ರಕ್ಷಕನಾದೆ ॥3॥

ರಣರಂಗದಲಿ ಪಾರ್ಥನಿಗೆ ಗೀತೆ ಉಪದೇಶಿಸಿದೆ
ಗೀತಾಚಾರ್ಯನಾಗಿ ಜ್ಞಾನದ ಬಾಗಿಲನುತೆರೆದು
ಕುರುಕ್ಷೇತ್ರದಲಿ ಪಾಂಚಜನ್ಯವ ಮೊಳಗಿಸಿದೆ
ದುಷ್ಟ ಶಿಕ್ಷಕ ಶಿಷ್ಟ ರಕ್ಷಕನೆಂಬ ಬಿರುದ ಪಡೆದೆ ॥4॥



ಶಾಪವಿತ್ತ ಗಾಂಧಾರಿಗೆ ತಲೆಬಾಗಿ ವಂದಿಸಿದೆ
ಯದುವಂಶ ನಾಶವ ಕಂಡರೂ ನಿರ್ಲಿಪ್ತನಾದೆ
ಬೇಡನ ಬಾಣಕ್ಕೆ ಅವತಾರ ಸಮಾಪ್ತಿಗೊಳಿಸಿದೆ
ದೇವರ ದೇವನು ನೀನಾಗಿ ಜಗತ್ತಿಗೇ ಗುರುವಾದೆ ॥5॥


**ಬಿ.ಈ. ಸೀತಾಲಕ್ಷ್ಮಿ**
9980196470


ತತ್ವ ವಿವೇಚನೆ

## ಪ್ರಿಯ – ಮೋದ – ಪ್ರಮೋದ

ನಾವು ಅನುಭವಿಸುವ ಲೌಕಿಕ ಆನಂದವನ್ನು ಮೂರು ಮಜಲುಗಳ ಮೇಲೆ 'ಪ್ರಿಯ, ಮೋದ, ಪ್ರಮೋದ' ಎಂದು, ನಮ್ಮ ಪ್ರಕರಣ ಗ್ರಂಥಗಳಲ್ಲಿ ವಿಭಜನೆ ಮಾಡಿದ್ದಾರೆ. ನಾವು ಬಹಳ ಪ್ರೀತಿಸುವ ವಸ್ತುವನ್ನೋ ಅಥವಾ ವ್ಯಕ್ತಿಯನ್ನೋ ಮನದಲ್ಲಿ ನೆನೆದಾಗ ಆಗುವ ಆನಂದಕ್ಕೆ 'ಪ್ರಿಯ ಎನ್ನುವರು. ಆ ವಸ್ತು/ವ್ಯಕ್ತಿಯನ್ನು ಪಡೆದಾಗ ಆಗುವ ಆನಂದವು 'ಮೋದ'. ಅದನ್ನು ವಾಸ್ತವವಾಗಿ ಅನುಭವಿಸುವ ಆನಂದವೇ 'ಪ್ರಮೋದ'.

ಉದಾಹರಣೆಗೆ, ನಾಳೆ ನಾವು ನಮ್ಮ ಬೆಸ್ಟ್ ಫ್ರೆಂಡ್ ಅನ್ನು ಭೇಟಿ ಮಾಡಲಿದ್ದೇವೆ ಎಂದುಕೊಳ್ಳೋಣ. ಆ ವಿವರಗಳನ್ನೆಲ್ಲ ಮನೆಯವರಿಗೆಲ್ಲ ಹೇಳಿ, ಅವರನ್ನು ನೋಡಿ ಎಷ್ಟು ದಿನಗಳಾಯಿತು ಎಂದೆಲ್ಲ ಪೇಚಾಡಿ ಮತ್ತು ಹೋಗಿ ನೋಡುವ ಸಂಭ್ರಮವನ್ನು ನೆನೆದು ಸಂತೋಷ ಪಡುತ್ತೇವೆ. ಇದು 'ಪ್ರಿಯ'.

ನಾವು ಒಬ್ಬರೊಬ್ಬರ ಮುಖಗಳನ್ನು ನೋಡಿದ ತತ್‌ಕ್ಷಣವೇ ಬಹಳವಾಗಿ ಸ್ಪಂದಿಸಿ, ಸಂಭ್ರಮ ಪಡುವುದು 'ಮೋದ'. ನಂತರ ನಾವುಗಳು ಒಬ್ಬರಿಗೊಬ್ಬರು ಕನೆಕ್ಟ್ ಮಾಡಿ, ನಮ್ಮ ನಮ್ಮ ಸುಖ ದುಃಖಗಳನ್ನು ಹಂಚಿ ಕೊಂಡು ತಾದಾತ್ಮ್ಯ ಭಾವವನ್ನು ಅನುಭವಿಸುತ್ತೇವೆ. ಇದನ್ನು 'ಪ್ರಮೋದ' ಎನ್ನುವರು. ಈ ಆನಂದವು ಬೇರೆ ವ್ಯಕ್ತಿಯಲ್ಲೋ ಅಥವಾ ವಸ್ತುವಿನಲ್ಲೋ ಇದೆಯೇ ಎಂದು ಪ್ರಶ್ನಿಸಿದಾಗ "ಇಲ್ಲ. ಇದು ನಮ್ಮೊಳಗೆಯೇ ಇರತಕ್ಕಂತಹ ಆನಂದ" ಎಂದು ಕೆಲ ಕಾರಣಗಳಿಂದ ತಿಳಿಯುತ್ತದೆ.

ಉದಾಹರಣೆಗೆ, ನಮಗೆ ಗುಲಾಬ್ ಜಾಮೂನು ಬಹಳ ಪ್ರಿಯ. ಒಂದನೇ ಜಾಮೂನು ಮಧುರವಾಗುತ್ತದೆ. ಸಾಲದೇನೋ ಎಂದು ಇನ್ನೊಂದನ್ನು ಸವಿಯುತ್ತೇವೆ. ಒಂದು ವೇಳೆ ಜಾಮೂನಿನಲ್ಲೇ ಆನಂದವು ಅಡಗಿದ್ದರೆ, ನಾವು ಹತ್ತನೆಯ ಜಾಮೂನನ್ನು ತಿಂದರೆ ಆಗ "ಪ್ರಮೋದಕ್ಕಿಂತ" ಪ್ರಮಾದವೇ ಆಗಬಹುದು!!

'Feel-good" happiness is ruled on the law of diminishing returns, ಎಂದು ಮನೋತಜ್ಞರೂ ಹೇಳುವರು. ಅತಿಯಾಗಿ ಮಿತಿ ಮೀರಿದರೆ ಈ ಆನಂದವು ಅಂದಗೆಡುವುದು. ಹಾಗಾಗಿ ಈ ಆನಂದಕ್ಕೆ ಅದರದೇ ಆದ ಚೌಕಟ್ಟಿದೆ ಎಂದು ಈ ಸಂದರ್ಭದಲ್ಲಿ ಅರ್ಥೈಸಬಹುದು.

ನಾವು ಸುಖವಾಗಿ ನಿದ್ರೆ ಮಾಡಿ ಎದ್ದಮೇಲೆ 'ಒಳ್ಳೆ ನಿದ್ದೆ ಬಂತು, ಏನೂ ಗೊತ್ತಾಗಲಿಲ್ಲ' ಎಂದು ತೃಪ್ತಿಯಾಗಿ ಹೇಳುತ್ತೇವೆ. ಆ ಸುಖ ನಿದ್ರೆಯಲ್ಲಿ ಯಾವ ಪ್ರಿಯ ವ್ಯಕ್ತಿಯಾಗಲೀ, ವಸ್ತುವಾಗಲೀ ಇರಲಿಲ್ಲ. ಗಾಢವಾದ ನಿದ್ರೆಯಲ್ಲಿ, ನಮ್ಮ ಇಂದ್ರಿಯಗಳು ಹೊರಮುಖವಾಗಿಲ್ಲ. ಆದ್ದರಿಂದ ಯಾವುದೇ ವರದಿ ತಂದು ಮನಸ್ಸಿಗೆ ಒಪ್ಪಿಸುತ್ತಿಲ್ಲ. ಯಾವುದೇ ಸುಂದರ ದೃಶ್ಯಗಳಾಗಲೀ, ರುಚಿ ರುಚಿಯಾದ ಭಕ್ಷ್ಯಗಳಾಗಲೀ, ಸುಶ್ರಾವ್ಯ ಸಂಗೀತವಾಗಲೀ ಇರಲಿಲ್ಲ. ಇವೆಲ್ಲದರ ಅಭಾವ ಇದ್ದರೂ ಸಹ, ಆನಂದವನ್ನು ಅನುಭವಿಸುತ್ತೇವೆ. ನಾವು ಅನುಭವಿಸುವ ಎಲ್ಲ ಆನಂದವೂ ವಾಸ್ತವಿಕವಾಗಿ ನಮ್ಮಲ್ಲೇ ಇದೆ. ಆದ್ದರಿಂದ ನಾವೇ ಆನಂದ ಸ್ವರೂಪವಾಗಿ ಇರುವವರು. ನಮ್ಮ ಸ್ವರೂಪವೇ ಆನಂದ. ಆದರೆ ಅಜ್ಞಾನದ ಕಾರಣದಿಂದ, ಅದನ್ನು ಬೇರೆ ಬೇರೆ ವಸ್ತು / ವ್ಯಕ್ತಿಗಳ ಮೇಲೆ ಅಧ್ಯಾರೋಪ (Superimpose) ಮಾಡುತ್ತೇವೆ ಎಂದು ಅದ್ವೈತ ವೇದಾಂತದಲ್ಲಿ ಸಿದ್ಧಪಡಿಸಿದೆ.




**ಮೀರಾ ಕೃಷ್ಣಮೂರ್ತಿ**
**97402 93012**

# WHATSAPP MESSAGES – MELKOTE TOUR

ಒಂದು ದಿನದ ಪ್ರವಾಸದಲ್ಲಿ ವಿತರಣಾ ರೀತಿ ಮತ್ತು ಸಜ್ಜುಗೊಳಿಸಿದ ರೀತಿಯು ಶಿಸ್ತಿನಂದಿತ್ತು. ಇದಕ್ಕೆ ಎಲ್ಲಾ ಕಮಿಟಿ ಮೆಂಬರುಗಳಿಗೆ ವಂದನೆಗಳು ಮತ್ತು ಶಿಸ್ತಿನ ಸದಸ್ಯರಗಳಿಗೂ ವಂದನೆಗಳು. **ಜಯಶ್ರೀ**

MMDBS ಏರ್ಪಡಿಸಿದ್ದ ಒಂದು ದಿನದ ಪ್ರವಾಸ ಸುಖವಾಗಿದ್ದು, ಶುಚಿಯಾಗಿ, ರುಚಿಯಾಗಿ ಬಾಯಿ ಚಪ್ಪರಿಸುವ ತಿನಿಸುಗಳು ಭಾಗವಹಿಸಿದವರನ್ನು ರಮಣೀಯ ದಿನವನ್ನಾಗಿಸಿತ್ತು. ಆಯೊಜಿಸಿದ ಬಳಗಕ್ಕೆ ಧನ್ಯವಾದ. ಪ್ರವಾಸ ಸುಖವಾಗಿ, ಸುಂದರವಾಗಿರಲಿ ಎಂದು ಸಹಕರಿಸಿದ ಪ್ರತಿಯೊಬ್ಬರಿಗೂ ಶುಭಾಶಯಗಳು. **ಕೆ. ಸಿ. ನಟರಾಜನ್**

Really I am glad to know the preparations going on. This shows the confidence members have with MMDBS. Those who are not part of the trip will be the losers. At least it will be better they make up their mind for the next year. Like they say "Journey is more beautiful than the destination." It is the journey with everyone that will be memorable and many people are missing out on it. Anyway it is exciting to see the preparations and we are waiting to meet everyone on Sunday.
**K L Shantha/Suhasini**

Thanks for all information about Melkote trip.
**R Bhagavan**

Thank you for the good arrangements by all of you. We expect great success from my side.
**T S Rameshan**

Thank you for the good arrangements by all of you. We expect great success from my side. Very nice trip with mouth watering dishes. Really memorable. My sincere thanks to all MMDBS committee members for their good service.
**Balasubramanyam**

All the committee members have done preparations. Thanks a lot. Very well planned. Wonderful preparations. Thanks to all the organizers. **Padmashree**

Thanks for the nice breakfast. **Girija Devi**

Thanks a lot for everything.Very well arranged trip. Thanks again. I enjoyed the trip and you had taken enough pain to arrange things. I thank all the committee members for it. **BP Vasantha**

Beautiful arrangements. Beautiful trip. Thank you organizers. **Saraswathi**

Nice arrangements. Superb lunch we had. We enjoyed a lot in bus A. Thank you all. **Roopashree**

Snacks were never ending. Too tasty and crisp. Thanks to all organizers. Super trip. Tasty menus. I really enjoyed. Looking forward for many more trips in near future. **HK Sadanand**

Had a wonderful time. Thank to all the managing committee members for the excellent arrangements. **BNG Kumar**

Congratulations Sir for the extraordinary effort in organizing all activities of the sangha to you and your team Sir and organizing the tour in particular.
**Ravishankar**

It was wonderful day and an awesome trip.
**Suman**

Thanks for making this day memorable
**Supreetha**

Kudos to organizers. One more landmark and memorable tour. Excellent event management.
**SRINIVASA MURTHY C S**

Thank you everyone to make this trip grand success. **Ganesh Shridhar**

Thanks for everyone for making the event successful. **V Arun**

Excellent trip. Very memorable one. We reached home safely. Thank you MMDBS committee members. **Padma Jagannath**

Kudos to all the organizers to make this trip grand success. **GN Sheela**

Thank you one and all, special thanks to President, Secretary and all the committee members for the nice arrangements. **Venkatesh**

Meticulous planning and brilliant execution of the event made the trip an absolutely enjoyable experience. No hassles faced whatsoever. Thank to all the committee members and their team in putting this together. **Parameshwar**

Thank you for the well organized trip. Thank you once again. **B E Sandhya**

Enjoyed every bit of the trip. Very well planned and executed. Thanks to committee members. Not to forget, food was too good. **K R Ramadevi**

Thanks for excellent trip. **S Vasudha**

Thanks to all participants. Made the trip excellent. Special thanks to President, Secretary and eminent committee members. **Suryanarayan**

Good trip. Enjoyed a lot. Excellent team work and coordination. **Srinivas**

Very well arranged trip. Thanks for everything and everyone. **Uma Devi Das**

Wonderful trip. Super good. Number of items must have crossed 100! Nice meeting Col Rajan, former Director, PMP PLAN AREN who was associated with a project called AES, in which I worked from BEL side in 90s. Great organizing by Somu, Mani, Shashi, KCN, Arun, Shridhar….. May their tribe increase.

**R P Mohan**

Thank you very much for beautiful trip.

**T P Jagannath**

Kudos to the MMDBS executive team for arranging memorable trip.

**Murali**

Nice arrangements done by MMDBS. Enjoyed a lot. We played games, antyakshari, and got to meet many people. Tasty breakfast, lunch, snacks, and dinner. Three cheers to the entire team of MMDBS.

**Sushma Ashok**

Melkote trip has been far enjoyable and memorable. I express my gratitude to the organizers, Mr. Mani, Mr. Arun, and Mr. Somu and the many other associates or members of the team like Ganesh, Shashi who have rendered unstinted support to the success of the trip consisting of people of age group from 15 to 75 in different health conditions. The planning has been meticulous with thought to detail and of course, the environment. I had read somewhat that "We all are tourists and God is our Travel Agent who already fixed all our Routes, Reservations, and Destinations" implying that all we need to do is to repose Trust in Him and enjoy the "Trip" called Life.

**Krishna B. Das**

Excellent trip arranged by MMDBS and very good Tiffin, lunch, snacks, and other items served. Thanks for all office bears and all committee members for their struggle for the nice trip. God will give good health for members. Good luck sir.

**K Gundappa**

Excellent trip. High disciplined members. Tremendous cooperation. Everyone responsible for the great success. It has given strength to the committee members for organizing more and more such events. Thanks once again to one and all. Long live MMDBS. Three cheers to participants.

**Somasundar**

*If un Delivered please return to :*

*President*

**'Brihacharana Sangha'** No. 8, 3rd Cross, Annaiyyappa Block, Kumarapark West, Bengaluru-560 020.

# ವಾರ್ತಾಚಿತ್ರ



ಬನ್ನೇರುಘಟ್ಟ ಚಂಪಕದಾಮ ಉತ್ಸವ ತಟ್ಟನಹಳ್ಳಿ ಸಮುದಾಯದವರಿಂದ




ಸಂಘದ ಪೋಷರಾದ ಶ್ರೀಮತಿ ಮತ್ತು ಶ್ರೀ ಗುಂಡಪ್ಪನವರ ಮೊಮ್ಮಗಳು ಹಾಗೂ ಶ್ರೀಮತಿ ಮತ್ತು ಶ್ರೀ ಗುರುಪ್ರಸನ್ನರವರ ಮಗಳು ಪ್ರಣವಿ ಜಿ. ಟೈಗರ್ ವರದಾಚಾರ್ ಸಂಗೀತ ಸ್ಪರ್ಧೆಯ ಪಿಟೀಲು ವಾದ್ಯದಲ್ಲಿ ಮೊದಲನೇ ಸ್ಥಾನ



ಸದಸ್ಯ ಆರ್.ಎಸ್. ಪ್ರಶಾಂತ್ ಅವರ 'ಓಂ ಸೂಪರ್ ಸೀಲ್ಸ್' ಸಂಸ್ಥೆಗೆ ಶ್ರೇಷ್ಠ ವಿತರಕ ಪ್ರಶಸ್ತಿಯು ಬೆಂಗಳೂರು ಪ್ರಿಂಟರ್ಸ್ ಅಸೋಸಿಯೇಷನ್ಸ್ ಅವರಿಂದ ದೊರಕಿದೆ

Book-Post

To,

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com